25 October 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 304 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಭಾವನಾಂತರಂಗ

ಮೌನವು ಒಂದು ಮಾತೇ, ಆದರೆ ಅದು ಸರಿಯಾದ ಸಮಯ, ಸರಿಯಾದ ಜಾಗದಲ್ಲಿ ಮಾತ್ರ!

ಸ್ನೇಹಾ ಆನಂದ್



ಸಾಲಗಳನ್ನು ಬಲವಂತ ವಸೂಲಿ ಬೇಡ: ಜಿಲ್ಲಾಧಿಕಾರಿ — ಪುಟ ಸಂ. 3

ಪುಟ ಸಂ. 3 — ಸಾರ್ವಜನಿಕ ಸ್ಥಳದಲ್ಲಿ ಮದ್ಯಪಾನ: 153 ಮಂದಿ ವಶಕ್ಕೆ, ದಂಡ ವಸೂಲಿ





ಜ್ಞಾನೇಶ್‌ಕುಮಾರ್ ಪದಚ್ಯುತಿಗೆ ಆಗ್ರಹ: ಪ್ರತಿಭಟನೆ — ಪುಟ ಸಂ. 4

ಬಂಡೀಪುರದಲ್ಲಿ ಹೊರಗಿನವರು ಕೃಷಿ ಭೂಮಿ ಖರೀದಿಗೆ ತಡೆ

ಹುಲಿ ಸಂರಕ್ಷಿತ ಪ್ರದೇಶಕ್ಕೆ ಅನ್ವಯ: ಪ್ರಾಧಿಕಾರ ಶಿಫಾರಸು



ನವದೆಹಲಿ: ಚಾಮರಾಜನಗರ ಜಿಲ್ಲೆಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಕಣಿಯನಪುರ ಆನೆ ಕಾರಿಡಾರ್ ಹಾಗೂ ಸುತ್ತಮುತ್ತಲಿನ ಪರಿಸರ ಸೂಕ್ಷ್ಮ ವಲಯದಲ್ಲಿ ಹೊರಗಿನ ವ್ಯಕ್ತಿಗಳು ಕೃಷಿಭೂಮಿ ಖರೀದಿಗೆ ಕಡಿವಾಣ ಹಾಕುವಂತೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಶಿಫಾರಸು ಮಾಡಿದೆ.

ಪ್ರಾಧಿಕಾರದ ಅರಣ್ಯ ಮಹಾನಿರೀಕ್ಷಕ (ಐಜಿಪಿ) ಶಿವಕುಮಾರ್ ಅವರು ಬಂಡೀಪುರ ಹುಲಿ ಅಭಯಾರಣ್ಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕೃಷಿ ಭೂಮಿ ಖರೀದಿಸಿ ಫಾರ್ಮ್‌ಹೌಸ್‌ಗಳನ್ನು ನಿರ್ಮಿಸುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಅವರು, ಕೇಂದ್ರ ಅರಣ್ಯ ಸಚಿವಾಲಯಕ್ಕೆ ವರದಿ ಸಲ್ಲಿಸಿದ್ದಾರೆ. ಈ ವರದಿ ಪ್ರತಿಯನ್ನು ಕರ್ನಾಟಕದ ಮುಖ್ಯ ವನ್ಯಜೀವಿ ಪರಿಪಾಲಕರಿಗೆ (ಪಿಸಿಸಿಎಫ್) ರವಾನಿಸಲಾಗಿದೆ.


ಪ್ರಮುಖ ವನ್ಯಜೀವಿ ಸಂಚಾರ ಮಾರ್ಗವಾಗಿರುವ ಕಣಿಯನಪುರ ಕಾರಿಡಾರ್‌ನಲ್ಲಿ ಫಾರ್ಮ್‌ಹೌಸ್‌ಗಳ ನಿರ್ಮಾಣದಿಂದ ಆನೆಗಳ ಸಂಚಾರಕ್ಕೆ ಅಡ್ಡಿಯಾಗುತ್ತಿದೆ ಎಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

2012 ಅಕ್ಟೋಬರ್ 4ರ ಪರಿಸರ ಸೂಕ್ಷ್ಮ ವಲಯದ ಅಧಿಸೂಚನೆ ಪ್ರಕಾರ, ಬಂಡೀಪುರದಲ್ಲಿ ಕೃಷಿಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ಪರಿವರ್ತಿಸುವುದನ್ನು ನಿಷೇಧಿಸಲಾಗಿದೆ. ಸ್ಥಳೀಯ ಜನಸಂಖ್ಯೆ ಸ್ವಾಭಾವಿಕ ಹೆಚ್ಚಳದಿಂದ ಉಂಟಾಗುವ ವಸತಿ ಅಗತ್ಯಗಳಿಗೆ ಮಾತ್ರ ರಾಜ್ಯ ಸರ್ಕಾರದ ಪೂರ್ವಾನುಮತಿಯೊಂದಿಗೆ ಸೀಮಿತ ವಿನಾಯಿತಿ ನೀಡಲಾಗಿದೆ. ಸ್ಥಳೀಯ ಸಮುದಾಯಗಳ ಪ್ರಸ್ತುತ ಕೃಷಿ ಮತ್ತು ತೋಟಗಾರಿಕೆ ಚಟುವಟಿಕೆಗಳಿಗೆ ಅವಕಾಶವಿದೆ. ಪರಿಸರ ಸೂಕ್ಷ್ಮವಾಗಿರುವ ವನ್ಯಜೀವಿ ಸಂಚಾರ ಮಾರ್ಗಗಳಲ್ಲಿನ ಕೃಷಿಭೂಮಿಯನ್ನು ಹೊರಗಿನವರು ಖರೀದಿಸಿ, ವಸತಿ ಅಭಿವೃದ್ಧಿ ಚಟುವಟಿಕೆ ನಡೆಸುವುದು ಸರಿಯಲ್ಲ ಎಂದು ವರದಿಯಲ್ಲಿ ತಿಳಿಸಿದ್ದಾರೆ.

ತಮಿಳುನಾಡಿನ ಸಿಗೂರು ಪುಟ 2ಕ್ಕೆ

ಎಇಇ ಫರ್ವೀಜ್ ಪತ್ತೆ

ಗದಗ: ಸರ್ಕಾರದ ವಿರುದ್ಧವೇ ಡೆತ್‌ನೋಟ್ ಬರೆದಿಟ್ಟು ಸೆಪ್ಟೆಂಬರ್ 14ರಂದು ನಾಪತ್ತೆಯಾಗಿದ್ದ ಕೆಆರ್‌ಡಿಐಎಲ್ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಫರ್ವೀಜ್ ಧಾರವಾಡ ಮುಂಬೈನಲ್ಲಿ ಪತ್ತೆಯಾಗಿದ್ದಾರೆ.



ಸರ್ಕಾರದಿಂದ ಅನುದಾನ ಬಿಡುಗಡೆಯಾಗದ ಹಿನ್ನೆಲೆ ಗುತ್ತಿಗೆದಾರರ ಒತ್ತಡಕ್ಕೆ ಬೇಸತ್ತು 4 ಪುಟಗಳ ಡೆತ್ ನೋಟ್ ಬರೆದಿಟ್ಟು ನಿಗೂಢವಾಗಿ ನಾಪತ್ತೆಯಾಗಿದ್ದ ಪರ್ವೇಜ್ 40 ದಿನಗಳ ಕಾಲ ಪೊಲೀಸರ ಕಣ್ಣಿಗೆ ಬೀಳದೆ ಐದು ರಾಜ್ಯಗಳಲ್ಲಿ ಅಲೆದಾಡುತ್ತಿದ್ದ. ರಾಜ್ಯ ಪೊಲೀಸ್ ತಂಡ ಮಹಾರಾಷ್ಟ್ರದ ಮುಂಬೈನಲ್ಲಿ ಪತ್ತೆಹಚ್ಚಿ ವಶಕ್ಕೆ ಪಡೆದಿದೆ.

ಪೊಲೀಸರು ತಮ್ಮ ಲೊಕೇಶನ್ ಪತ್ತೆಹಚ್ಚಬಾರದು ಎಂಬ ಉದ್ದೇಶದಿಂದ ಪರ್ವೇಜ್ ಮೊಬೈಲ್ ಫೋನ್ ಸ್ವಿಚ್ಡ್ ಆಫ್ ಮಾಡಿಕೊಂಡಿದ್ದರು. ಯಾವುದೇ ಎಟಿಎಂ ಅಥವಾ ಡಿಜಿಟಲ್ ಪಾವತಿಗಳನ್ನು ಬಳಸದೆ ನಗದು ಹಣದಲ್ಲೇ ಬದುಕು ಸಾಗಿಸುತ್ತಿದ್ದರು. ಇದು ತನಿಖಾ ತಂಡಕ್ಕೆ ಜಾಡು ಹಿಡಿಯಲು ಭಾರೀ ಸವಾಲಾಗಿ ಪರಿಣಮಿಸಿತ್ತು.

ಸಿದ್ದುಗೆ ಸ್ಟಿಂಗ್: ಒಬ್ಬನ ಬಂಧನ

ಮೂವರು ಆರೋಪಿಗಳು ಎಸ್ಕೇಪ್ । ಬಂಧಿತನ ತೀವ್ರ ವಿಚಾರಣೆ



ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ಭಾರೀ ಸದ್ದು ಮಾಡುತ್ತಿರುವ ಮಾಜಿ ಮುಖ್ಯಮಂತ್ರಿ ಸ್ಟಿಂಗ್ ಆಪರೇಷನ್ ಪ್ರಕರಣದಲ್ಲಿ ಒಬ್ಬ ಆರೋಪಿಯನ್ನು ಬಂಧಿಸಲಾಗಿದೆ. ಮೂವರು ಸಹಚರರು ಪರಾರಿ ಆಗಿದ್ದಾರೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ 'ಸ್ಟಿಂಗ್ ಆಪರೇಷನ್' ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮೂಲದ ರಿತೇಶ್ ಪಾಂಡೆ ಎಂಬಾತನನ್ನು ಸಿಸಿಬಿ ಪೊಲೀಸರು ಶನಿವಾರ ಬಂಧಿಸಿದ್ದಾರೆ. ಬಂಧಿತ ಆರೋಪಿ ವಿಡಿಯೋ ರೆಕಾರ್ಡ್ ಮಾಡಲು ಹಳೆಯ ಮೊಬೈಲ್ ಖರೀದಿ ಮಾಡಿದ್ದಾನೆ ಎನ್ನಲಾಗಿದೆ. ಆರೋಪಿಯನ್ನು ದೆಹಲಿಯಲ್ಲಿ ಬಂಧಿಸಿ ಬೆಂಗಳೂರಿಗೆ ಕರೆತರಲಾಗಿದೆ. ಸಿಸಿಬಿ ಸೈಬರ್ ಕ್ರೈಮ್ ಪೊಲೀಸರು ರಹಸ್ಯ ಸ್ಥಳದಲ್ಲಿ ಆರೋಪಿ ವಿಚಾರಣೆ ನಡೆಸುತ್ತಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಸಿಸಿಬಿ ಪೊಲೀಸರು ಕಾಂಗ್ರೆಸ್ ನಾಯಕಿ ಕೃಪಾ ಆಳ್ವಾ ಅವರನ್ನು ವಶಕ್ಕೆ ಪಡೆಯಲು ಮುಂದಾಗಿದ್ದಾರೆ ಎನ್ನಲಾಗಿದೆ. ಪುಟ 2ಕ್ಕೆ

ಸಿಸಿಬಿ ಪೊಲೀಸರಿಗೆ ಕೃಪಾ ಆಳ್ವಾ ಶರಣು?

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ 'ಸ್ಟಿಂಗ್ ಆಪರೇಷನ್' ಪ್ರಕರಣದ ಪ್ರಮುಖ ಆರೋಪಿ ಕರಾವಳಿ ಕರ್ನಾಟಕದ ಕಾಂಗ್ರೆಸ್ ಮಹಿಳಾ ನಾಯಕಿ ಬೆಂಗಳೂರಿನ ಸೆಂಟ್ರಲ್ ಕ್ರೈಮ್ ಬ್ರಾಂಚ್ (ಸಿಸಿಬಿ) ಪೊಲೀಸರ ಮುಂದೆ ಶರಣಾಗಿದ್ದಾರೆ ಎಂದು ತಿಳಿದುಬಂದಿದೆ. ಆದರೆ, ಪೊಲೀಸರು ಇನ್ನೂ ಬಂಧನ ಪ್ರಕ್ರಿಯೆಯನ್ನು ಅಧಿಕೃತಗೊಳಿಸಿಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಪೊಲೀಸರು ಕಾಂಗ್ರೆಸ್ ನಾಯಕಿ ಕೃಪಾ ಆಳ್ವಾ ಅವರನ್ನು ವಶಕ್ಕೆ ಪಡೆದಿದ್ದಾರೆ. ತನಿಖಾಧಿಕಾರಿಯ ಮುಂದೆ ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ನೋಟಿಸ್ ನೀಡಿದ ಬೆನ್ನಲ್ಲೇ, ಈ ಮಹಿಳಾ ನಾಯಕಿ ಶರಣಾಗಿದ್ದಾರೆ ಎನ್ನಲಾಗಿದೆ.

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಈ ಸ್ಟಿಂಗ್ ಆಪರೇಷನ್ ಹಿಂದೆ ಕಾಂಗ್ರೆಸ್ ನಾಯಕಿ ಕೃಪಾ ಆಳ್ವ ಮತ್ತು ರಾಕೇಶ್ ಶೆಟ್ಟಿ ಇದ್ದಾರೆ ಎಂದು ಆರೋಪಿಸಿದರು.

ಇದಕ್ಕೂ ಮುನ್ನ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕೂಡ ಈ ಸ್ಟಿಂಗ್ ಆಪರೇಷನ್‌ಗೆ ಇವರಿಬ್ಬರೂ ಕಾರಣ ಎಂದು ದೂರಿದ್ದರು. ಈ ಸ್ಟಿಂಗ್ ಆಪರೇಷನ್ ವಿವಾದಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರು ಅಕ್ಟೋಬರ್ 6 ರಂದು ಸೈಬರ್ ಕ್ರೈಮ್ ಪೊಲೀಸರಿಗೆ ದೂರು ನೀಡಿದ್ದರು.

ಕೆಪಿಎಸ್‌ಸಿ ಹಗರಣ: ಗ್ಯಾನೇಂದ್ರ ಪ್ರಾಸಿಕ್ಯೂಷನ್‌ಗೆ ಸಿಎಂ ಅನುಮತಿ





ಬೆಂಗಳೂರು: ಕೆಪಿಎಸ್‌ಸಿ ನೇಮಕಾತಿ ಹಗರಣದಲ್ಲಿ ಬಂಧನದಲ್ಲಿರುವ ಐಎಎಸ್ ಅಧಿಕಾರಿ ಗ್ಯಾನೇಂದ್ರ ಕುಮಾರ್ ಗಂಗ್ವಾರ್ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು ಶನಿವಾರ ಆದೇಶ ಹೊರಡಿಸಿದ್ದಾರೆ. ಭ್ರಷ್ಟಾಚಾರ ಪ್ರಕರಣದಲ್ಲಿ ಗ್ಯಾನೇಂದ್ರ ಕುಮಾರ್ ಗಂಗ್ವಾರ್ ವಿರುದ್ಧ ಕಾನೂನು ಕ್ರಮ ಜರುಗಿಸಲು ಅನುಮತಿ ನೀಡಿದ್ದಾರೆ.

ಪಶುವೈದ್ಯಾಧಿಕಾರಿ ನೇಮಕಾತಿ ಪರೀಕ್ಷೆ ಪ್ರಶ್ನೆಪತ್ರಿಕೆ ಮತ್ತು ಉತ್ತರಗಳನ್ನು ಸೋರಿಕೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಪರೀಕ್ಷೆ ಅಕ್ರಮ ಕುರಿತು ಈ ಕ್ರಮಕೈಗೊಳ್ಳಲಾಗಿದೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023ರ ಕಲಂ 218ರ ಅಡಿಯಲ್ಲಿ ಕಡತ ಮತ್ತು ಸಂಬಂಧಿತ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ಅನುಮತಿ ನೀಡಲಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಕೆಪಿಎಸ್‌ಸಿ ಮೂಲಕ ಪಶುವೈದ್ಯಾಧಿಕಾರಿ ಹಾಗೂ ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಕೇಳಿಬಂದಿತ್ತು. ಈ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ (ಇ.ಡಿ), ಪ್ರಶ್ನೆಪತ್ರಿಕೆ ಸೋರಿಕೆ ಆರೋಪದ ಹಿನ್ನೆಲೆಯಲ್ಲಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಅವರನ್ನು ಬಂಧಿಸಿತ್ತು.

ಬಂಧನದ ಬಳಿಕ ಅವರನ್ನು ಹುದ್ದೆಯಿಂದ ಅಮಾನತು ಮಾಡಲಾಗಿದೆ. 14 ದಿನಗಳ ಕಸ್ಟಡಿ ಅವಧಿ ಮುಗಿದ ನಂತರ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ನ್ಯಾಯಾಲಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು.

ಗ್ಯಾನೇಂದ್ರ ಕುಮಾರ್ ಮತ್ತು ತುಮಕೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಬಸವರಾಜ್ ಕನ್ನಾಳೆ ಅವರಿಂದ ಪ್ರಶ್ನೆಪತ್ರಿಕೆ ಸೋರಿಕೆ ಸಂಬಂಧ ಪಿತೂರಿ ನಡೆದಿದೆ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಸೋರಿಕೆಯ ಮೂಲಕ ಪರೀಕ್ಷಾ ಆಕಾಂಕ್ಷಿಗಳಿಂದ ಕೋಟ್ಯಂತರ ರೂಪಾಯಿ ಸಂಗ್ರಹಿಸಲಾಗಿದೆ ಎಂದು ಇ.ಡಿ. ಆರೋಪಿಸಿದೆ.

ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಕನ್ನಾಳೆ 1.50 ಕೋಟಿ ರೂಪಾಯಿ ಲಂಚವನ್ನು ಮುಂಗಡವಾಗಿ ಪುಟ 2ಕ್ಕೆ

ಎಚ್‌ಡಿಕೆ ಎಡಗೈ–ಬಲಗೈ ಬಂಟರು

'ಸ್ಟಿಂಗ್ ಆಪರೇಷನ್' ಪ್ರಕರಣದ ನಾಪತ್ತೆ: ಸಚಿವ ಪ್ರಿಯಾಂಕ್ ವಾಗ್ದಾಳಿ

ಬೆಂಗಳೂರು: ಸಿದ್ದರಾಮಯ್ಯ ವಿರುದ್ಧದ 'ಸ್ಟಿಂಗ್ ಆಪರೇಷನ್' ಪ್ರಕರಣದಲ್ಲಿ ನಾಪತ್ತೆಯಾಗಿರುವವರು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಎಡಗೈ–ಬಲಗೈ ಬಂಟರು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಶನಿವಾರ ವಾಗ್ದಾಳಿ ನಡೆಸಿದರು.



ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವರು, ಸ್ಟಿಂಗ್ ವಿಚಾರದಲ್ಲಿ ಮೂವರು ಪರಾರಿ ಆಗಿದ್ದಾರಲ್ಲವೇ? ಅವರನ್ನು ಯಾರು ಓಡಿಸಿರೋದು? ನೋಟಿಸ್ ಕೊಟ್ಟ ಮೇಲೆ ಎಲ್ಲಿ ಪುಟ 2ಕ್ಕೆ

ಎಚ್‌ಡಿಕೆ ಕಂಪ್ಲೆಂಟ್ ಕೊಡಲಿ

ವಿಕ್ಕಿ ಅನ್ನೋ ವ್ಯಕ್ತಿಯ ಹತ್ಯೆ ಮಾಡಲಾಗಿದೆ ಎಂಬ ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ ಅವರು, ಕುಮಾರಸ್ವಾಮಿ ಅವರು ಅದ್ಯಾವುದೋ ಹಳೇ ಪ್ರಕರಣ ತಗೊಂಡು ಈಗ ಪುಟ 2ಕ್ಕೆ

ಆನೆ ದಂತ ಮಾರಾಟ ಯತ್ನ: ಇಬ್ಬರ ಬಂಧನ



ಮೈಸೂರು: ತಾಲ್ಲೂಕಿನ ಚಿಕ್ಕಹಳ್ಳಿ ಗ್ರಾಮದ ಶ್ರೀರಾಮ ಬಡಾವಣೆಯ ಮೊಸಂಬಾಯನಹಳ್ಳಿ ರಸ್ತೆಯಲ್ಲಿ ಆನೆ ದಂತ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದ ಇಬ್ಬರನ್ನು ಬಂಧಿಸಿದ್ದಾರೆ. ಒಂದು ಆನೆದಂತವನ್ನು ವಶಕ್ಕೆ ಪಡೆಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.



ಹುಣಸೂರು ತಾಲ್ಲೂಕಿನ ಬಲ್ಲೇನಹಳ್ಳಿ ಗ್ರಾಮದ ಜೆ. ರವಿಚಂದ್ರ, ಕ್ಯಾತಮಾರನಹಳ್ಳಿಯ ನಿವಾಸಿ ಜೆ.ರಾಜೇಶ್ ರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮತ್ತೋರ್ವ ಆರೋಪಿ ತಲೆಮರೆಸಿಕೊಂಡಿರುತ್ತಾನೆ.

ಆನೆದಂತ ಸಾಗಾಣಿಕೆ ಮಾಡಲು ಬಳಸಿದ್ದ ಬಜಾಜ್ ಪಲ್ಸರ್ ಬೈಕ್, ಬ್ಯಾಗ್ ಮತ್ತು ಎರಡು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಚಾಮರಾಜನಗರ ಅರಣ್ಯ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ.ಎಂ. ಪ್ರಭಾವತಿ ಮಾರ್ಗದರ್ಶನದಲ್ಲಿ ಹಾಗೂ ಮೈಸೂರು ಅರಣ್ಯ ಸಂಚಾರಿದಳದ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಿ.ವೈ.ರಾಜು ಮಾರ್ಗದರ್ಶನದಲ್ಲಿ ಆನೆ ಕಾರ್ಯಪಡೆ ನಡೆಸಿದೆ.

ಕಬ್ಬು ಬೆಳೆಗಾರರ ಬೇಡಿಕೆ ಈಡೇರದಿದ್ದರೆ ರಾಜ್ಯ ಬಂದ್

ಬೆಳಗಾವಿ: ಕಬ್ಬು ಬೆಂಬಲ ಬೆಲೆಗೆ ಆಗ್ರಹಿಸಿ ಹೋರಾಟ ನಡೆಸುತ್ತಿರುವ ರೈತರು ರಾಜ್ಯ ಸರ್ಕಾರಕ್ಕೆ ಅಂತಿಮ ಗಡುವು ನೀಡಿದ್ದಾರೆ.

ಅಕ್ಟೋಬರ್ 26 ರಂದು ಬೆಳಗಾವಿಯಲ್ಲಿ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆಯಲಿರುವ ಉನ್ನತ ಮಟ್ಟದ ಸಭೆಗೂ ಮುನ್ನ ರೈತ ಸಂಘಟನೆಗಳು ಮೂರು ಪ್ರಮುಖ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿವೆ. ಬೇಡಿಕೆ ಈಡೇರದಿದ್ದರೆ ಅಕ್ಟೋಬರ್ 27ರಂದು ರಾಜ್ಯಾದ್ಯಂತ ಬಂದ್ ಆಚರಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಕರ್ನಾಟಕ ರೈತ ಸಂಘ ಹಸಿರು ಸೇನೆಯ ಪ್ರಧಾನ ಕಾರ್ಯದರ್ಶಿ ಪ್ರೇಮ್ ಚೌಗಲಾ ಅವರು, ಮುಖ್ಯಮಂತ್ರಿ ಅವರೊಂದಿಗಿನ ಸಭೆಯಲ್ಲಿ ರೈತರ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂಬ ನಿರೀಕ್ಷೆಯಿದೆ. ಸಭೆಯಲ್ಲಿ ಮೂರು ಪ್ರಮುಖ ಬೇಡಿಕೆಗಳನ್ನು ಮಂಡಿಸಲಾಗುವುದು ಎಂದು ಹೇಳಿದರು.

ರಾಜ್ಯ ಸರ್ಕಾರ ಪ್ರತಿ ಟನ್ ಕಬ್ಬಿಗೆ ರೂ.1,000 ಬೆಂಬಲ ಬೆಲೆ ನೀಡಬೇಕು, ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ರೂ. 4,500 ಪಾವತಿಸಬೇಕು ಹಾಗೂ ಕಬ್ಬಿನ ತೂಕ ಮಾಡುವಾಗ ಕಸ ಅಥವಾ ಕೆಸರು ಇದೆ ಎಂಬ ಕಾರಣ ನೀಡಿ ಹಣ ಕಡಿತ ಗೊಳಿಸುವ ಅಕ್ರಮ ಪದ್ಧತಿಯನ್ನು ತಡೆಯಬೇಕು ಎಂಬುದು ರೈತರ ಪ್ರಮುಖ ಬೇಡಿಕೆಗಳಾಗಿವೆ ಎಂದು ತಿಳಿಸಿದರು.

ಈ ಬೇಡಿಕೆಗಳಿಗೆ ರಾಜ್ಯ ಸರ್ಕಾರ ಸ್ಪಂದಿಸದಿದ್ದರೆ ಅಕ್ಟೋಬರ್ 27ರಂದು ಕರ್ನಾಟಕ ಬಂದ್ ಎಂದೂ ಎಚ್ಚರಿಕೆ ನೀಡಿದ್ದಾರೆ.



ಅದ್ದೂರಿ ಚಾಮುಂಡೇಶ್ವರಿ ರಥೋತ್ಸವ

ಸಾವಿರಾರು ಭಕ್ತರು ಭಾಗಿ । ತಾಯಿಗೆ ಮೊಳಗಿದ ಜಯಘೋಷ

ಮೈಸೂರು: ಚಾಮುಂಡಿಬೆಟ್ಟದಲ್ಲಿ ಜಿಟಿಜಿಟಿ ಮಳೆ ನಡುವೆಯೂ ಸಾವಿರಾರು ಭಕ್ತರ ಸಮ್ಮುಖದಲ್ಲಿ ನಾಡಿನ ಅಧಿದೇವತೆ ಚಾಮುಂಡೇಶ್ವರಿ ದೇವಿಯ ರಥೋತ್ಸವ ಶನಿವಾರ ಸಡಗರ, ಸಂಭ್ರಮದಿಂದ ನಡೆಯಿತು.

ರಾಜವಂಶಸ್ಥ ಹಾಗೂ ಸಂಸದ ಯದುವೀರ ಒಡೆಯರ್ ಪೂಜೆ ಸಲ್ಲಿಸಿದರು. ನಂತರ ಮೂರ್ತಿಯನ್ನು ರಥದೊಳಗೆ ಪ್ರತಿಷ್ಠಾಪಿಸಲಾಯಿತು. ಯದುವೀರ್ ಅವರು ರಥದ ಹಗ್ಗ ಎಳೆದು ರಥೋತ್ಸವಕ್ಕೆ ಚಾಲನೆ ನೀಡಿದರು. ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಸಿಂಹವಾಹಿನಿ ಅಲಂಕಾರ ಮಾಡಲಾಗಿತ್ತು.

ರಥೋತ್ಸವ ಪ್ರಯುಕ್ತ ಮುಂಜಾನೆ 4ರಿಂದಲೇ ಚಾಮುಂಡೇಶ್ವರಿ ದೇವಾಲಯದಲ್ಲಿ ಪೂಜಾ ಕಾರ್ಯಕ್ರಮಗಳು ನಡೆದವು. ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ ಪಂಚಾಮೃತಾಭಿಷೇಕ ಸಹಸ್ರನಾಮಾರ್ಚನೆ ಸೇರಿ ವಿವಿಧ ಪೂಜೆ ನೆರವೇರಿಸಲಾಯಿತು. ಮೈಸೂರು ನಗರ ಸೇರಿದಂತೆ ಚಾಮುಂಡಿಬೆಟ್ಟದ ಸುತ್ತಲಿನ ಗ್ರಾಮಗಳಾದ ಉತ್ತನಹಳ್ಳಿ, ಹೊಸ ಹುಂಡಿ, ಬಂಡಿ ಪಾಳ್ಯ, ಲಲಿತಾದ್ರಿಪುರ, ಆಲನಹಳ್ಳಿ ಸೇರಿದಂತೆ ವಿವಿಧೆಡೆಯಿಂದ ಪುಟ 2ಕ್

ಮದ್ಯಪಾನ: 153 ಮಂದಿ ವಶಕ್ಕೆ, ದಂಡ ವಸೂಲಿ

ರಾಮನಗರ: ಸಾರ್ವಜನಿಕ ಸ್ಥಳಗಳಲ್ಲಿ ಬಹಿರಂಗವಾಗಿ ಮದ್ಯಪಾನ ಮಾಡಿ ಪುಂಡಾಟಿಕೆ ನಡೆಸುತ್ತಿದ್ದುವರ ವಿರುದ್ಧ ಜಿಲ್ಲಾ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ 153 ಜನರನ್ನು ವಶಕ್ಕೆ ಪಡೆದುಕೊಂಡು ವಿವಿಧ ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ವ್ಯಾಪ್ತಿಯ ವಿವಿಧ ಠಾಣೆಗಳ ಕಾರ್ಯವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗಿದೆ. ರಾಮನಗರ ನಗರ ಪ್ರದೇಶದ ಐಜೂರು, ಕೊಂಕಾಣಿ ದೊಡ್ಡಿ, ಕೆಂಪೇಗೌಡ ವೃತ್ತ, ರಾಮನಗರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಶಾನುಭೋಗನಹಳ್ಳಿ, ಕೆಂಪೇಗೌಡನ ದೊಡ್ಡಿ, ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ, ತಾವರೆಕೆರೆ ಪೊಲೀಸ್ ಠಾಣಾ ವ್ಯಾಪ್ತಿಯ ತಾವರೆಕೆರೆ ಟೌನ್, ಬಸ್ ನಿಲ್ದಾಣ ಹಾಗೂ ದೊಡ್ಡಿ ಆಲದ ಮರದ ಸುತ್ತಮುತ್ತಲಿನ ಪ್ರದೇಶ. ಚನ್ನಪಟ್ಟಣ ನಗರ ಮತ್ತು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಕಣ್ವ ಲೇಔಟ್, ಎಪಿಎಂಸಿ, ಅನ್ನಪೂರ್ಣೇಸ್ವರಿ ಲೇಔಟ್, ಅಪ್ಪಗೆರೆ ಹಾಗು ಕುವೆಂಪು ನಗರ ಪ್ರದೇಶಗಳು, ಕಗ್ಗಲೀಪುರ ಪೊಲೀಸ್ ಠಾಣಾ ವ್ಯಾಪ್ತಿಯ ಕಗ್ಗಲೀಪುರ, ಸೋಮನಹಳ್ಳಿ, ಆಗರ, ತಾತಗುಣಿ ಪ್ರದೇಶಗಳಲ್ಲಿ ಪೊಲೀಸರು ಪರಿಶೀಲನೆ ನಡೆಸಿದ್ದರು.



ಸಾರ್ವಜನಿಕ ಸ್ಥಳಗಳಲ್ಲಿ ಬಹಿರಂಗವಾಗಿ ಮದ್ಯ ಪಾನ ಮಾಡಿ ಪುಂಡಾಟಿಕೆ ನಡೆಸುತ್ತಿದ್ದ ಆರೋಪದಡಿಯಲ್ಲಿ 153 ಮಂದಿಯನ್ನು ಪೊಲೀಸರು ವಶಕ್ಕೆ ಪಡೆದು ಕೊಂಡಿದ್ದರು. ಹೀಗೆ ವಶಕ್ಕೆ ಪಡೆದವರನ್ನು ಆಯಾ ಪೊಲೀಸ್ ಠಾಣೆಗಳಿಗೆ ಕರೆದುಕೊಂಡು ಹೋಗಿ, ಪ್ರಕರಣ ದಾಖಲಿಸಿ ದಂಡ ವಿಧಿಸಿದ್ದಾರೆ. ಸಾರ್ವಜನಿಕ ಶಾಮತಿಮತ್ತು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಅವರಿಗೆಲ್ಲ ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ.

ಐ.ಎಂ.ವಿ. ಕಾಯ್ದೆ ಅಡಿ 311 ಪ್ರಕರಣ, 1,18600 ರೂ ದಂಡ ವಸೂಲು

ಜಿಲ್ಲಾ ಪೊಲೀಸರು ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಐ.ಎಂ.ವಿ (ಮೋಟಾರು ವಾಹನ ಕಾಯ್ದೆ) ಅಡಿಯಲ್ಲಿ ಒಟ್ಟು 311 ಪ್ರಕರಣಗಳು ದಾಖಲಾಗಿವೆ. ಒಟ್ಟು 1 ಲಕ್ಷ 18 ಸಾವಿರ 600 ರೂ ದಂಡ ವಸುಲು ಮಾಡಿದೆ. ಕೋಟ್ಪಾ (ಧೂಮಪಾನ ಕಾಯ್ದೆ) ಕಾಯ್ದೆಯಡಿ 41 ಪ್ರಕರಣಗಳು ದಾಖಲಾಗಿವೆ, ಒಟ್ಟು 42 ಸಾವಿರದ 600 ರೂ ದಂಡ ವಿಧಿಸಲಾಗಿದೆ. 181 ಲಘ ಪ್ರಕರಣಗಳು, 14 ಡಿಡಿ ಪ್ರಕರಣಗಳು ಮತ್ತು ಅಕ್ರಮ ಮದ್ಯ ಮಾರಾಟದ ಮೂರು ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

ಟೆಕ್ನೋ ಆಯುರ್ವೇದ ಯಶಸ್ವಿ ಸಮಾವೇಶ

ಮೈಸೂರು: ಟೆಕ್ನೋ ಆಯುರ್ವೇದ ಅಭಿವೃದ್ಧಿಗೆ ಪೂರಕ 11ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಅಂಗವಾಗಿ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಮೈಸೂರು ಮತ್ತು ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದ ಸಹಯೋಗದೊಂದಿಗೆ ಟೆಕ್ನೋ ಆಯುರ್ವೇದ ಎಂಬ ರಾಷ್ಟ್ರೀಯ ಸಮಾವೇಶವನ್ನು ನಡೆಸಿತು.

ಈ ಸಮಾರಂಭದ ಉದ್ಘಾಟನೆ ನೇರವೇರಿಸಿದ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದ ಅಧ್ಯಕ್ಷ ಗುಂಡಪ್ಪ ಮಾತನಾಡಿ, ಆಯುರ್ವೇದವು ಭಾರತದ ಪರಂಪರೆಯ ಒಂದು ವಿಶಿಷ್ಟ ವೈದ್ಯ ಪದ್ಧತಿಯಾಗಿದ್ದು ಈ ಪದ್ಧತಿಗೆ ತಾಂತ್ರಿಕ ನೆಲೆಗಟ್ಟನ್ನು ನೀಡಿದಲ್ಲಿ ಇದು ಅಭಿವೃದ್ಧಿಗೆ ಪೂರಕ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಟ್ರಸ್ಟಿನ ಕಾರ್ಯದರ್ಶಿ ವಿಶ್ವನಾಥ್ ಮಾತನಾಡಿ, ಟೆಕ್ನೋ ಆಯುರ್ವೇದ ಎಂಬುದು ಒಂದು ಅದ್ಭುತ ಪರಿಕಲ್ಪನೆ ಆಯುರ್ವೇದದ ಅಭಿವೃದ್ಧಿಗೆ ಇದು ಮುಂದಿನ ದಿನಗಳಲ್ಲಿ ಎಂದು ಹಾರೈಸಿದರು. ಕಾರ್ಯಕ್ರಮದಲ್ಲಿ ಅತಿಥಿಯಾದ ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಪುರ ನಾರಾಯಣ ಮಾತನಾಡಿ, ಇಂತಹ ಕಾರ್ಯಕ್ರಮಗಳ ಆಯುರ್ವೇದವನ್ನು ವಿಶ್ವದ



ಭೂಪಟದಲ್ಲಿ ಗುರುತಿಸಲು ಸಹಕಾರಿಯಾಗಬಲ್ಲದು. ಇಂತಹ ಕಾರ್ಯಕ್ರಮಗಳು ಆಗಾಗ ನಡೆಯುವುದು ಸೂಕ್ತ ಎಂದು ಸಭೆಗೆ ತಮ್ಮ ಮನದಾಳದ ಮಾತನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಆನ್ಲೈನ್ ಮುಖಾಂತರ ಭಾರತ ಸರ್ಕಾರದ ಸಲಹೆಗಾರ ಡಾ. ಕೌಸ್ತುಭ ಉಪಾಧ್ಯಾಯ, ಆಯುಷ್ ಇಲಾಖೆ ಆಯುಕ್ತ ಡಾಕ್ಟರ್ ಸುನಿ ಪನ್ನವರ್, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಕುಲಪತಿ ಡಾ.ವಿದ್ಯಾಶಂಕರ್ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಈ ಕಾರ್ಯಕ್ರಮದಲ್ಲಿ ನಗರದ 12 ತಾಂತ್ರಿಕ ಕಾಲೇಜುಗಳ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು

ಮೊದಲ ಪುಟದಿಂದ

ಕೃಷಿ ಭೂಮಿ ಖರೀದಿಗೆ ತಡೆ

ಆನೆ ಕಾರಿಡಾರ್‌ನ ಮಾದರಿಯಲ್ಲೇ ಕರ್ನಾಟಕ ಸರ್ಕಾರವು ಕಣಿಯನಪುರ ಆನೆ ಕಾರಿಡಾರ್ ಅನ್ನು ಪ್ರತ್ಯೇಕ ಆನೆ ಕಾರಿಡಾರ್ ಎಂದು ಘೋಷಿಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಿದ್ದಾರೆ. ಭೂಬಳಕೆಯಲ್ಲಿನ ಬದಲಾವಣೆಗಳನ್ನು ನಿಯಂತ್ರಿಸಲು, ಪರಿಸರ ಸೂಕ್ಷ್ಮ ಪ್ರದೇಶಗಳು ಹಾಗೂ ವನ್ಯಜೀವಿ ಸಂಚಾರ ಮಾರ್ಗಗಳನ್ನು ಸಂರಕ್ಷಿಸಲು 2012ರ ಅಕ್ಟೋಬರ್ 4ರ ಪರಿಸರ ಸೂಕ್ಷ್ಮ ವಲಯದ ಅಧಿಸೂಚನೆಯಲ್ಲಿ ಉಲ್ಲೇಖಿಸಿರುವ ವಲಯ ಮಾಸ್ಟರ್ ಪ್ಲಾನ್ ಅನ್ನು ಸಿದ್ಧಪಡಿಸಬೇಕು ಎಂದು ಅವರು ತಿಳಿಸಿದ್ದಾರೆ.

ಅಂಬಾರಿ ಆನೆ ಬಗ್ಗೆ ಆತಂಕವಿತ್ತು

ನನಗೆ ಆತಂಕವಿತ್ತು. ಹಿಂದೆಂದೂ ಈ ರೀತಿಯ ಆತಂಕ ನನಗೆ ಆಗಿರಲಿಲ್ಲ. ಆದರೆ, ಈ ಬಾರಿ ನನ್ನ ಎಲ್ಲ ಆತಂಕಗಳನ್ನು ಮೀರಿ ಪ್ರಶಾಂತ್ ಉತ್ತಮವಾಗಿ ಅಂಬಾರಿ ಹೊತ್ತಿದ್ದಾನೆ. ಇದರಿಂದ ನನಗೆ ಬಹಳ ಸಂತೋಷವಾಗಿದೆ. ಚಾಮುಂಡಿ ತಾಯಿ ಎಲ್ಲರಿಗೂ ಆಶೀರ್ವಾದ ಮಾಡಿದ್ದಾಳೆ ಎಂಬ ಭಾವನೆ ನನಗಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು.

ನಾಡಿಗೆ ಕೆಡುಕಾಗಲ್ಲ

ಮಾತನಾಡುವುದಾಗಿ ತಿಳಿಸಿದರು. ಅರಮನೆಯ ವಿಧಿವಿಧಾನಗಳು ಸಂಪ್ರದಾಯದಂತೆ ನಿಗದಿತ ಮುಹೂರ್ತದಲ್ಲೇ ನಡೆಯಬೇಕು. ಮುಹೂರ್ತ ಮೀರಿದ ಬಳಿಕ ಯಾವುದೇ ಕಾರ್ಯವನ್ನು ಮಾಡುವುದಿಲ್ಲ. ಹೀಗಾಗಿಯೇ ಜಟ್ಟಿ ಕಾಳಗಕ್ಕೂ ಮುನ್ನ ವಿಜಯಯಾತ್ರೆ ನಡೆಸಿದ್ದೇವೆ. ಈ ವಿಚಾರದಲ್ಲಿ ನಾನು ಯಾವುದೇ ಜ್ಯೋತಿಷಿಗಳ ಸಲಹೆ ಪಡೆದಿಲ್ಲ. ಎಲ್ಲವನ್ನೂ ದೇವರ ಮೇಲೆ ಭಾರ ಹಾಕಿದ್ದೇನೆ. ಹೀಗಾಗಿ, ನನಗೆ ಯಾವುದೇ ಆತಂಕವಿಲ್ಲ ಎಂದು ಸ್ಪಷ್ಟಪಡಿಸಿದರು.

ಪೊಲೀಸರ ಹಲ್ಲೆಗೆ ಖಂಡನೆ

ನೀಡಬೇಕು. ಮಾಧ್ಯಮದವರಿಗೆ ಒಂದು ಶಿಷ್ಟಾಚಾರ ರೂಪಿಸಬೇಕು. ಪತ್ರಕರ್ತರಿಗೂ ಸಭೆ ಮಾಡಿ ಮಾಹಿತಿ ನೀಡಬೇಕಿತ್ತು. ಇದ್ಯಾವುದನ್ನು ಮಾಡಿಲ್ಲ. ಇದರಿಂದ ಗೊಂದಲವಾಗಿದೆ ಎಂದರು.

ಒಂದು ಮಟ್ಟಿಗೆ ದಸರಾ ಯಶಸ್ವಿಯಾಗಿದೆ. ಒಂದು ವರ್ಗಕ್ಕೆ ಆನಂದವಾಗಿದೆ. ಕೆಲವು ವಿಫಲವಾಗಿವೆ. ಕೆಲವು ಕಾರ್ಯಕ್ರಮಗಳು ಚೆನ್ನಾಗಿಯೇ ಆಗಿವೆ. ಆದರೆ, ವ್ಯವಸ್ಥೆಯಲ್ಲಿ ಇನ್ನೂ ಸುಧಾರಣೆ ಮಾಡುವುದು ಬಹಳಷ್ಟು ಇದೆ. ಪ್ರತಿವರ್ಷ ಇಂತಹ ಸಮಸ್ಯೆಗಳಾಗುತ್ತವೆ. ನಾವು ಅಧಿಕಾರಕ್ಕೆ ಬಂದಾಗಲೂ ಸಮಸ್ಯೆಗಳಾಗಿವೆ. ಸಮಸ್ಯೆಗಳನ್ನು ಬಗೆಹರಿಸಬೇಕಿದೆ ಎಂದರು.

ಪ್ರಾಸಿಕ್ಯೂಷನ್‌ಗೆ ಸಿಎಂ ಅನುಮತಿ

ಸಂಗ್ರಹಿಸಿದ್ದರೆಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ. ಈ ಪೈಕಿ 1.30 ಕೋಟಿ ರೂಪಾಯಿಯನ್ನು ಗಂಗ್ವಾರ್‌ಗೆ ನಗದು ರೂಪದಲ್ಲಿ ಪಾವತಿಸಲಾಗಿದೆ ಎನ್ನಲಾಗಿದೆ. ಈ ಹಣದಲ್ಲಿ ಕೆಪಿಎಸ್‌ಸಿಯ ಮಾಜಿ ಅಧಿಕಾರಿಯೊಬ್ಬರಿಗೆ 23 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣ ಖರೀದಿಸಲಾಗಿದೆ ಎಂಬ ಆರೋಪವನ್ನೂ ಇ.ಡಿ. ಮಾಡಿದೆ.

ಸಿದ್ದುಗೆ ಸ್ಟಿಂಗ್: ಒಬ್ಬನ ಬಂಧನ

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ್ದ ಸಿದ್ದರಾಮಯ್ಯ ಅವರು, ಈ ಸ್ಟಿಂಗ್ ಆಪರೇಷನ್ ಹಿಂದೆ ಕಾಂಗ್ರೆಸ್ ನಾಯಕಿ ಕೃಪಾ ಆಳ್ವ ಮತ್ತು ಕನ್ನಡ ಸುದ್ದಿ ವಾಹಿನಿ ಮುಖ್ಯಸ್ಥ ರಾಕೇಶ್ ಶೆಟ್ಟಿ ಭಾಗಿ ಆಗಿದ್ದಾರೆ ಎಂದು ಆರೋಪಿಸಿದ್ದರು.

ಕುಶಾಲತೋಪು ಸಿಡಿಸಿ ಗೌರವ

ವಾದ್ಯಗೋಷ್ಠಿಗಳ ನಾದ, ಸಿಡಿಮದ್ದಿನ ಸದ್ದು, ಕಲಾ ತಂಡಗಳ ಪ್ರದರ್ಶನ ರಥೋತ್ಸವದ ರಂಗು ಹೆಚ್ಚಿಸಿತು. ಸಾವಿರಾರು ಭಕ್ತರು ಒಕ್ಕೊರಲಿನಿಂದ ನಾಡದೇವತೆಗೆ ಜೈಕಾರ ಕೂಗಿದರು. ಬಾಳೆಹಣ್ಣು, ಜವನ ಎಸೆದು ಪ್ರಾರ್ಥಿಸಿದರು. 45 ನಿಮಿಷಗಳವರೆಗೆ ಸಾಗಿಬಂದ ರಥ ಚಾಮುಂಡೇಶ್ವರಿ ದೇವಸ್ಥಾನದ ಪ್ರವೇಶದ್ವಾರ ತಲುಪಿತು. ಅಲ್ಲಿ ನೆರೆದಿದ್ದ ಭಕ್ತರು, ರಥದ ಹಗ್ಗ ಮುಟ್ಟಿ ಪುನೀತರಾದರು. ಕೆಲವರು ನಮಸ್ಕರಿಸಿದರು. ರಥಕ್ಕೆ ಸಿಂಗರಿಸಿದ್ದ ಹೂವುಗಳನ್ನು ಪಡೆಯಲು ಮುಗಿಬಿದ್ದರು.

ಚಾಮುಂಡೇಶ್ವರಿ ರಥೋತ್ಸವ

ಭಕ್ತರು ಜಮಾಯಿಸಿದ್ದರು. ರಥೋತ್ಸವ ಹಾಗೂ ನಂತರದ ದೇಗುಲ ದರ್ಶನಕ್ಕೆ ನೂಕುನುಗ್ಗಲು ಉಂಟಾಗಿತ್ತು. ಮುಂಜಾಗ್ರತಾ ಕ್ರಮವಾಗಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಚಾಮುಂಡೇಶ್ವರಿ ದೇವಾಲಯದಲ್ಲಿ ದೇವಿ ದರ್ಶನಕ್ಕೆ ಅವಕಾಶ ಮಾಡಲಾಯಿತು. ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ವಿಧಿವಿಧಾನಗಳು ನೆರವೇರಿದವು. ಸಂಜೆ ಮಂಟಪೋತ್ಸವ, ಸಿಂಹವಾಹನೋತ್ಸವ ಹಾಗೂ ಹಂಸವಾಹನೋತ್ಸವವೂ ನೆರವೇರಿತು. ಸೋಮವಾರ ಸಂಜೆ 7ಕ್ಕೆ ತೆಪ್ಪೋತ್ಸವ ನಡೆಯಲಿದೆ. ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್, ಯದುವೀರ್ ಪತ್ನಿ ತ್ರಿಷಿಕಾ ಕುಮಾರಿ ಇತರರು ಇದ್ದರು.

ಎಚ್‌ಡಿಕೆ ಕಂಪ್ಲೆಂಟ್ ಕೊಡಲಿ

ಬಂದಿದ್ದಾರೆ. ಅದರ ಬಗ್ಗೆಯೂ ಕಂಪ್ಲೆಂಟ್ ಕೊಟ್ಟರೆ ತನಿಖೆ ಮಾಡ್ತೀವಿ. ಇಲ್ಲಿವರೆಗೆ ಕಂಪ್ಲೆಂಟ್ ಬಂದಿಲ್ಲ. ಕುಮಾರಸ್ವಾಮಿ ಅವರೇ ಕಂಪ್ಲೆಂಟ್ ಕೊಡಲಿ ತನಿಖೆ ಮಾಡಿಸ್ತೀವಿ. ನಿಮ್ಮ ವೈಯಕ್ತಿಕ ದ್ವೇಷಗಳನ್ನು ನಮ್ಮ ಮುಖಾಂತರ ತೀರಿಸಿಕೊಳ್ಳೋದು ಬೇಡ ಎಂದು ಕಿಡಿಕಾರಿದರು.

ಎಚ್‌ಡಿಕೆ ಎಡಗೈ–ಬಲಗೈ ಬಂಟರು

ಮಾಯ ಆಗಿದ್ದಾರೆ? ಯಾರ ಮನೆಯಲ್ಲಿ ಬಚ್ಚಿಟ್ಟುಕೊಂಡಿದ್ದಾರೆ? ಅದು ದೊಡ್ಡವರಿಗೆ ಗೊತ್ತಿರುತ್ತದೆಯಲ್ಲವೆ? ಅವರನ್ನು ತನಿಖೆಗೆ ಕಳಿಸೋಕೆ ಹೇಳಿ. ಆವಾಗ ಎಲ್ಲಾ ಸತ್ಯ ಗೊತ್ತಾಗುತ್ತದೆ. ನಾಪತ್ತೆ ಆಗಿರೋರು ಯಾರು ಅಂತ ಕುಮಾರಸ್ವಾಮಿ ಅವರನ್ನೇ ಕೇಳಿ, ಹೇಳ್ತಾರೆ. ಅವರದೇ ಎಡಗೈ–ಬಲಗೈ ಎಂದು ಆರೋಪಿಸಿದರು.

ಸ್ಟಿಂಗ್ ಯಾರು ಮಾಡಿದ್ದು, ಯಾಕೆ ಮಾಡಿದ್ದು, ಅವರ ಹಿಂದೆ ಯಾರಿದ್ದಾರೆ, ಇಷ್ಟು ವರ್ಷ ಆದಮೇಲೆ ಯಾರ ಕೈಗೆ ಸಿಕ್ತು, ಇದ್ದಕ್ಕಿದ್ದಂತೆ ಯಾಕೆ ಅಪ್ಲೋಡ್ ಆಯ್ತು? ಈ ಎಲ್ಲವೂ ಶೀಘ್ರದಲ್ಲೇ ಬಯಲಾಗಲಿದೆ. ಅದರ ಮೂಲದಿಂದ ಹಿಡಿದು ಇಲ್ಲಿ ತನಕ ಏನೇನಾಗಿದೆ ಎಲ್ಲವನ್ನು ಬಟಾಬಯಲು ಮಾಡುತ್ತೇವೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.ಸ್ಟಿಂಗ್ ಪ್ರಕರಣದಲ್ಲಿ ಕ್ರಿಮಿನಲ್ ಪಿತೂರಿ ಇರುವುದು ಸ್ಪಷ್ಟ. ಸತ್ಯ ಹೊರಬರಲಿ ಅಂತ ಸಿದ್ದರಾಮಯ್ಯ ಕಂಪ್ಲೇಂಟ್ ಕೊಟ್ಟಿದ್ದಾರೆ. ನಾವು ತನಿಖೆಯನ್ನು ಕೈಗೊಂಡಿದ್ದೇವೆ. ಪೊಲೀಸ್ ಅಧಿಕಾರಿಗಳು ಕೂಲಂಕುಷವಾಗಿ ತನಿಖೆ ನಡೆಸುತ್ತಿದ್ದಾರೆ. ಇಂದಲ್ಲ, ನಾಳೆ ಸತ್ಯ ಆಚೆ ಬರಲಿದೆ. ಇದರಲ್ಲಿ ಅನುಮಾನ ಪಡುವಂತದ್ದು ಏನೂ ಇಲ್ಲ. ಸ್ವಲ್ಪ ಸಮಯ ಬೇಕು ಎಂದು ಹೇಳಿದರು.

ಕಲಾವಿದರು ಶೈಕ್ಷಣಿಕ ಮುಂದಿದ್ದಾರೆ

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷೆ ಶುಭಾ ಧನಂಜಯ ಹೇಳಿಕೆ

ರಾಮನಗರ: ಓದಿನ ಹೆಸರಿನಲ್ಲಿ ಕಲೆಗಳನ್ನು ಕಡೆಗಣಿಸಬೇಡಿ. ಯಾವ ಕಲಾವಿದರೂ ತಮ್ಮ ಶೈಕ್ಷಣಿಕ ವಿಚಾರದಲ್ಲಿ ಹಿಂದೆ ಬಿದ್ದಿಲ್ಲ. ಕೇವಲ ಓದಿನ ಕಡೆಗೇ ಗಮನಕೊಟ್ಟು ಓದುವ ಮಕ್ಕಳಿಗಿಂತಲೂ ಹೆಚ್ಚು ಕ್ರಿಯಾಶೀಲರಾಗಿದ್ದು, ಅತಿ ಹೆಚ್ಚು ಅಂಕಗಳನ್ನು ಗಳಿಸಿದ ಉದಾಹರಣೆಗಳು ಸಾಕಷ್ಟಿವೆ ಎಂದು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷೆ ಶುಭಾ ಧನಂಜಯ ಹೇಳಿದರು.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ರಾಮನಗರದ ನ್ಯೂ ಎಕ್ಸ್ಸ್ ಫರ್ಟ್ ಕಾಲೇಜು ಸಹಯೋಗದಲ್ಲಿ ಇಂದು ನಡೆದ ಸಂಗೀತ ನೃತ್ಯವೈಭವ –2026 ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅಕಾಡೆಮಿ ಸದಸ್ಯರೊಡಗೂಡಿ ಕ್ರಿಯಾಯೋಜನೆ ಮಾಡುವಾಗಲೇ ನಾಡಿನಾದ್ಯಂತ ಸಂಸ್ಕೃತಿ ಪ್ರಸರಿಸುವ ಕೆಲಸವಾಗಬೇಕೆಂಬ ಅಚಲ ನಿರ್ಧಾರ ತೆಗೆದುಕೊಂಡು, ಅದರಂತೆ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಿದ ತೃಪ್ತಿಯಿದೆ ಎಂದರು. ಕಾರ್ಯಕ್ರಮದ ಅಂಗವಾಗಿ ಚನ್ನಪಟ್ಟಣದ ರಾಮಚಂದ್ರ ಮತ್ತು ತಂಡದ ಸುಗಮ ಸಂಗೀತ, ರಾಮನಗರದ ಮಂಜುಳ ರವಿಕುಮಾರ್ ತಂಡದ ಸಮೂಹ ನೃತ್ಯ, ಮಾಗಡಿಯ ಶಾಂತಲ ಬಿ.ಎಚ್. ತಂಡದ ಶಾಸ್ತ್ರೀಯ ನೃತ್ಯ, ಚನ್ನಪಟ್ಟಣದ ಬಿ. ಸಿದ್ಧರಾಜಯ್ಯ ತಂಡದ ವಚನ ಗಾಯನ, ಹಾಗೂ ಹಾರೋಹಳ್ಳಿಯ ಎನ್. ಜ್ಯೋತಿ ತಂಡವು ಭರತನಾಟ್ಯ ಕಾರ್ಯಕ್ರಮ ಪ್ರದರ್ಶಿಸಿದರು.



ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪರಿಸರ ಪ್ರೇಮಿ ಸಾಲುಮರದ ನಿಂಗಣ್ಣ ಕಾರ್ಯಕ್ರಮ ಉದ್ಘಾಟಿಸಿದರು. ನ್ಯೂ ಎಕ್ಸ್ಸ್ ಫರ್ಟ್ ಕಾಲೇಜು ಪ್ರಾಂಶುಪಾಲ ಡಾ. ಡಿ.ಆರ್. ರವಿಕುಮಾರ್, ಪ್ರಗತಿಪರ ರೈತ ಮಹಿಳೆ ಶಾಂತಮ್ಮ ವೈ.ಸಿ. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸದಸ್ಯ ಸಂಚಾಲಕಿ ಉಷಾ ಬಸಪ್ಪ ವೇದಿಕೆಯ ಗಣ್ಯರನ್ನು ಸ್ವಾಗತಿಸಿ ದರು. ಅಕಾಡೆಮಿ ರಿಜಿಸ್ಟಾರ್ ರಶ್ಮಿ ಟಿ.ಎಸ್. ಪ್ರಾಸ್ತಾವಿಕವಾಗಿ ಮಾತನಾಡಿದರು. ಜನಪದ ಗಾಯಕ ಡಾ. ಜೋಗಿಲ ಸಿದ್ಧರಾಜು, ನ್ಯೂ ಎಕ್ಸ್ಸ್ ಪರ್ಟ್ ಕಾಲೇಜು ಸಾಂಸ್ಕೃತಿಕ ಸಂಚಾಲಕಿ ನಿವೇದಿತ ಎಸ್., ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿಟಿ. ದಿನೇಶ್ ಬಿಳಗುಂಬ ವೇದಿಕೆಯಲ್ಲಿದ್ದರು. ವಾಣಿಜ್ಯಶಾಸ್ತ್ರ ವಿಭಾಗ ಮುಖ್ಯಸ್ಥ ದಯಾನಂದ ಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಕನ್ನಡ ಸಹಾಯಕ ಪ್ರಧಾಯಾಪಕಿ ಪೂಜಾ ನಂದ ವಂದನಾರ್ಪಣೆ ಮಾಡಿದರು.

ಕಲೆಗಳು ಹೃದಯದ ಭಾಷೆ ಮಾತನಾಡುತ್ತವೆ: ಎಂ.ಬೈರೇಗೌಡ

ಕಾರ್ಯಕ್ರಮದ ಅಂಗವಾಗಿ ಉಪನ್ಯಾಸ ನೀಡಿದ ಜಾನಪದ ತಜ್ಞ ಡಾ.ಎಂ.ಬೈರೇಗೌಡ ಮಾತನಾಡಿ ಸಂಗೀತ, ನೃತ್ಯ, ನಾಟಕ, ಜಾನಪದ ಯಾವುದೇ ವಿಷಯಗಳು ಹೃದಯದ ಭಾಷೆಯಾಗಿ ಮಾತನಾಡುತ್ತವೆ. ಕಾಲ ದೇಶದ ಹಂಗು ತೊರೆದು ಎಲ್ಲರ ಮನಸ್ಸನ್ನು ಹಗುರಾಗಿಸುವ ಶಕ್ತಿ ಪಡೆದುಕೊಂಡಿರುತ್ತವೆ. ಜಗತ್ತಿನಾದ್ಯಂತ ಹಲವು ನೃತ್ಯ ಪ್ರಕಾರಗಳಿದ್ದು, ಸಾವಿರಾರು ವರ್ಷಗಳಿಂದಲೂ ಅವು ಉಳಿದುಬಂದಿವೆ. ಒಂದು ದೇಶದ ಇತಿಹಾಸವು ಆ ದೇಶದ ಕಲಾವೈಶಿಷ್ಟ್ಯತೆಯ ಮೇಲೆ ನಿರ್ಧರಿತವಾಗುತ್ತದೆ. ಭಾರತ ದೇಶ ಅಂತಹ ವಿಶಿಷ್ಟತೆಯಿಂದ ಕೂಡಿದೆ. ಈ ವಿಚಾರದಲ್ಲಿ ಕರ್ನಾಟಕ ಅಗ್ರಸ್ಥಾನದಲ್ಲಿದೆ ಎಂದರು. ಇಡೀ ವಿಶ್ವದಲ್ಲಿಯೇ ಇಲ್ಲದ ಸುಗಮ ಸಂಗೀತವೆಂಬ ಕವಿಗಳ ಕವನಗಳಿಗೆ ಭಾವ, ರಾಗಗಳನ್ನು ಹಾಕಿ ಹಾಡುವ ಪ್ರಕಾರ ಕನ್ನಡದಲ್ಲಿ ಮಾತ್ರವೇ ಇರುವುದು ವಿಶೇಷ ಎಂದರು. ಇಲ್ಲಿಗೆ ನೂರು ವರ್

ನ. 1 ರಂದು ಕರ್ನಾಟಕ ರಾಜ್ಯೋತ್ಸವ

ಸನ್ಮಾನಕ್ಕಾಗಿ ವಿವಿಧ ಕ್ಷೇತ್ರಗಳ ಸಾಧಕರಿಂದ ಅರ್ಜಿ ಆಹ್ವಾನ

ಚಾಮರಾಜನಗರ, ಜಿಲ್ಲೆಯಲ್ಲಿ ನವೆಂಬರ್ 1 ರಂದು ನಡೆಯಲಿರುವ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಸನ್ಮಾನಕ್ಕಾಗಿ ಕಲೆ, ಸಂಸ್ಕೃತಿ, ಭಾಷೆ, ಸಾಹಿತ್ಯ, ಸಂಗೀತ, ನೃತ್ಯ, ರಂಗಭೂಮಿ, ಜಾನಪದ, ಶಿಕ್ಷಣ, ಆರೋಗ್ಯ, ಕ್ರೀಡೆ, ಪತ್ರಿಕೋದ್ಯಮ, ಸಾವಯವ ಕೃಷಿ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲಾಕೇಂದ್ರದಲ್ಲಿ ನಡೆಯಲಿರುವ 2026–27ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವ್ಯಕ್ತಿಗಳನ್ನು ಗುರುತಿಸಿ ಸನ್ಮಾನಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಕರ್ನಾಟಕ ರಾಜ್ಯೋತ್ಸವ ಸನ್ಮಾನ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ. ಅರ್ಜಿ ಸಲ್ಲಿಸುವ ಸಾಧಕರು ಚಾಮರಾಜನಗರ ಜಿಲ್ಲೆಯವರಾಗಿರಬೇಕು. ಅರ್ಜಿದಾರರು ಕನಿಷ್ಠ 45 ವರ್ಷಗಳ ವಯೋಮಿತಿ ಹೊಂದಿರಬೇಕು. ಸರ್ಕಾರಿ ನೌಕರರಾಗಿರಬಾರದು. ಸಂಗೀತ, ನೃತ್ಯ, ರಂಗಭೂಮಿ, ಸಾವಯವ ಕೃಷಿ, ಪತ್ರಿಕೋದ್ಯಮ, ದೃಶ್ಯಮಾಧ್ಯಮ, ಜಾನಪದ, ಶಿಕ್ಷಣ, ಸಾಹಿತ್ಯ, ಆರೋಗ್ಯ, ಸಂಘಟನೆ, ಶಾಂತಿ ಮತ್ತು ಮಾನವತೆ, ಸಹಕಾರ, ಕಲೆ, ಭಾಷೆ, ಸಂಸ್ಕೃತಿ, ಕ್ರೀಡೆ, ಹಾಗೂ ಇನ್ನಿತರೆ ಸಮಾಜಮುಖಿ, ಸಾಂಸ್ಕೃತಿಕ ಸೇರಿದಂತೆ ಯಾವುದಾದರೊಂದು ಕ್ಷೇತ್ರದಲ್ಲಿ ಕನಿಷ್ಠ 10 ವರ್ಷ ಉತ್ತಮ ಸೇವೆ ಸಲ್ಲಿಸಿರಬೇಕು.

ಈ ಹಿಂದೆ ಜಿಲ್ಲಾಮಟ್ಟದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನಿತರಾಗಿದ್ದಲ್ಲಿ ಮತ್ತೊಮ್ಮೆ ಸನ್ಮಾನಕ್ಕೆ ಅರ್ಹರಾಗುವುದಿಲ್ಲ ಹಾಗೂ ಈ ಹಿಂದೆ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನಿತರಾಗಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ನೀಡಬೇಕು. ನಿಗದಿತ ಮಾನದಂಡಗಳನ್ನು ಪೂರೈಸಿದ ಜಿಲ್ಲೆಯ ಯಾವುದೇ ವ್ಯಕ್ತಿ ತಮ್ಮ ಸಂಪೂರ್ಣ ಸೇವಾ ವಿವರಗಳನ್ನು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರ, ಚಾಮರಾಜನಗರ ಇವರಿಗೆ ಕಡ್ಡಾಯವಾಗಿ ಅಕ್ಟೋಬರ್ 28ರ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬೇಕು. ಜಿಲ್ಲಾಮಟ್ಟದ ಕರ್ನಾಟಕ ರಾಜ್ಯೋತ್ಸವ ಸನ್ಮಾನಕ್ಕಾಗಿ ಅರ್ಹ ವ್ಯಕ್ತಿಗಳನ್ನು ಆಯ್ಕೆ ಮಾಡುವಲ್ಲಿ ಯಾವುದೇ ಸಂಘ ಸಂಸ್ಥೆಗಳ ಶಿಫಾರಸುಗಳನ್ನು ಪರಿಗಣಿಸುವುದಿಲ್ಲ. ಅರ್ಹರ ಆಯ್ಕೆಯಲ್ಲಿ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

1.30 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

15 ಕೋಟಿ ರೂ. ವಿಶೇಷ ಅನುದಾನದಲ್ಲಿ ಮತ್ತಷ್ಟು ಮೂಲಸೌಕರ್ಯ ಅಭಿವೃದ್ಧಿ: ಶಾಸಕ ಗಣೇಶ್ ಪ್ರಸಾದ್

ಗುಂಡ್ಲುಪೇಟೆ: ತಾಲೂಕಿನ ಗ್ರಾಮೀಣ ಪ್ರದೇಶಗಳ ಮೂಲಸೌಕರ್ಯ ಬಲಪಡಿಸುವ ಉದ್ದೇಶದಿಂದ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಒಟ್ಟು 1.30 ಕೋಟಿ ರೂ. ವೆಚ್ಚದಲ್ಲಿ ಕೂತನೂರು, ಕೊಡಹಳ್ಳಿ ಹಾಗೂ ಬೆಟ್ಟಹಳ್ಳಿ ಗ್ರಾಮಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಅವರು ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಕೂತನೂರು ಗ್ರಾಮದಲ್ಲಿ 50 ಲಕ್ಷ ರೂ., ಕೊಡಹಳ್ಳಿಯಲ್ಲಿ 50 ಲಕ್ಷ ರೂ. ಹಾಗೂ ಬೆಟ್ಟಹಳ್ಳಿಯಲ್ಲಿ 30 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿಗಳು ನಡೆಯಲಿವೆ. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಗಣೇಶ್ ಪ್ರಸಾದ್, ತಾಲೂಕಿನ ಪ್ರತಿಯೊಂದು ಗ್ರಾಮದಲ್ಲೂ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಗ್ರಾಮೀಣ ಭಾಗದಲ್ಲಿ ಸುಸಜ್ಜಿತ ರಸ್ತೆ ಹಾಗೂ ಚರಂಡಿ ನಿರ್ಮಾಣದ ಮೂಲಕ ಜನರಿಗೆ ಉತ್ತಮ ಮೂಲಸೌಕರ್ಯ ಕಲ್ಪಿಸುವುದು ನಮ್ಮ ಗುರಿಯಾಗಿದೆ. ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಇನ್ನೂ 15 ಕೋಟಿ ರೂ. ಲಭ್ಯವಿದ್ದು, ಇದನ್ನು ಬಳಸಿಕೊಂಡು ತಾಲೂಕಿನಾದ್ಯಂತ ಹಲವು ಪ್ರಮುಖ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ನಿರ್ಮಾಣವಾಗುವ ರಸ್ತೆ ಮತ್ತು ಚರಂಡಿ ಕಾಮಗಾರಿಗಳು ಉತ್ತಮ ಗುಣಮಟ್ಟದಿಂದ ಕೂಡಿರಬೇಕು ಎಂದು ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಕಾರ್ಯಕ್ರಮದಲ್ಲಿ ಕಾಡಾ ಮಾಜಿ ಅಧ್ಯಕ್ಷ ನಂಜಪ್ಪ, ಎಪಿಎಂಸಿ ಅಧ್ಯಕ್ಷ ವಿರೂಪಾಕ್ಷ, ಮಾಜಿ ಪುರಸಭಾ ಅಧ್ಯಕ್ಷ ಕಿರಣ್ ಗೌಡ, ಎಇಇ ಅರ್ಚನಾ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಮುಖಂಡರು, ಸಾರ್ವಜನಿಕರು ಹಾಗೂ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



ಅತ್ಯಾಧುನಿಕ ಸೇವೆಗೆ ಚಾಲನೆ



ಮೈಸೂರು: ಅತ್ಯಾಧುನಿಕ ಹೃದಯ ಆರೈಕೆ ಸೌಲಭ್ಯಗಳನ್ನು ಬಲಪಡಿಸುವ ನಿಟ್ಟಿನಲ್ಲಿ, ಅವಾಂಟ್ ಬಿಕೆಜಿ ಹಾಸ್ಪಿಟಲ್ಸ್ ಇಂದು ಕೃತಕ ಬುದ್ಧಿಮತ್ತೆ ಆಧಾರಿತ ಅತ್ಯಾಧುನಿಕ ಹೈ-ಡೆಫಿನಿಷನ್ ಇಂಟ್ರಾವಾಸ್ಕುಲರ್ ಅಲ್ಟ್ರಾಸೌಂಡ್ ತಂತ್ರಜ್ಞಾನಕ್ಕೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು.

ಬಳಿಕ ಮಾತನಾಡಿ, ಮೈಸೂರಿನಲ್ಲಿ ಅತ್ಯಾಧುನಿಕ ಆರೋಗ್ಯ ಸೌಲಭ್ಯಗಳ ಅಭಿವೃದ್ಧಿಯು ಈ ಭಾಗದ ಜನರಿಗೆ ವಿಶೇಷ ವೈದ್ಯಕೀಯ ಚಿಕಿತ್ಸೆಯನ್ನು ಸುಲಭವಾಗಿ ಲಭ್ಯವಾಗುವಂತೆ ಮಾಡುವಲ್ಲಿ ಮಹತ್ವದ ಹೆಜ್ಜೆಯಾಗಿದೆ. ಐವಿಯುಎಸ್ ನಂತಹ ತಂತ್ರಜ್ಞಾನಗಳ ಪರಿಚಯ ಹಾಗೂ ಕನಿಷ್ಠ ಆಕ್ರಮಣಕಾರಿ ಹೃದಯ ಶಸ್ತ್ರಚಿಕಿತ್ಸಾ ಸೇವೆಗಳ ಅಭಿವೃದ್ಧಿಯು ಮೈಸೂರು ನಗರ ಮತ್ತು ಸುತ್ತಮುತ್ತಲಿನ ಜಿಲ್ಲೆಗಳ ರೋಗಿಗಳಿಗೆ ಮೈಸೂರಿನಲ್ಲೇ ಅತ್ಯಾಧುನಿಕ ಹೃದಯ ಚಿಕಿತ್ಸೆಯನ್ನು ಪಡೆಯಲು ನೆರವಾಗುತ್ತದೆ. ಇದರಿಂದ ಅನೇಕ ಸಂಕೀರ್ಣ ಚಿಕಿತ್ಸೆಗಳಿಗಾಗಿ ದೊಡ್ಡ ಮಹಾನಗರಗಳಿಗೆ ಪ್ರಯಾಣಿಸುವ ಅಗತ್ಯವನ್ನು ಕಡಿಮೆ ಮಾಡಬಹುದು ಎಂದರು.

ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ರೋಬೋಟಿಕ್ ಮೂಳೆ ಶಸ್ತ್ರಚಿಕಿತ್ಸಕ ಡಾ.ಟಿ.ಎನ್. ಬಾಲಕೃಷ್ಣಗೌಡ, ಹೃದ್ರೋಗ ವಿಭಾಗದ ನಿರ್ದೇಶಕ ಹಾಗೂ ಮುಖ್ಯ ಇಂಟರ್ವೆನ್ಷನಲ್ ಕಾರ್ಡಿಯಾಲಜಿಸ್ಟ್ ಡಾ.ಜೆ.ರಾಜಗೋಪಾಲ್ ಮತ್ತು ಹೃದಯ, ಎದೆ ಹಾಗೂ ರಕ್ತನಾಳ ಶಸ್ತ್ರಚಿಕಿತ್ಸಾ ವಿಭಾಗದ ನಿರ್ದೇಶಕ ಹಾಗೂ ಹಿರಿಯ ಸಿಟಿವಿಎಸ್ ಶಸ್ತ್ರಚಿಕಿತ್ಸಕ ಡಾ.ಎಸ್.ಸಿ.ಮಧುಪ್ರಕಾಶ್ ಉಪಸ್ಥಿತರಿದ್ದರು.

ರಾಘವಾಪುರದಲ್ಲಿ ಆರೋಗ್ಯ ಶಿಬಿರ



ಗುಂಡ್ಲುಪೇಟೆ: ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆ ರವರ ಪಟ್ಟಾಭಿಷೇಕದ 59ನೇ ವರ್ಧಂತ್ಯೋತ್ಸವದ ಅಂಗವಾಗಿ ಗುಂಡ್ಲುಪೇಟೆ ತಾಲೂಕಿನ ಬೇಗೂರು ವಲಯದ ರಾಘವಾಪುರ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿತ್ತು.

ಶಾಲೆಯ ಮುಖ್ಯೋಪಾಧ್ಯಾಯ ರಮೇಶ್ ಅವರು ದೀಪ ಬೆಳಗಿಸುವ ಮೂಲಕ ಶಿಬಿರವನ್ನು ಉದ್ಘಾಟಿಸಿ, ನಂತರ ಮಾತನಾಡಿ ಆರೋಗ್ಯವೇ ಭಾಗ್ಯವಾಗಿದ್ದು, ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಪೌಷ್ಟಿಕ ಆಹಾರ ಸೇವನೆ, ಉತ್ತಮ ಜೀವನಶೈಲಿ ಹಾಗೂ ನಿಯಮಿತ ಆರೋಗ್ಯ ತಪಾಸಣೆಯಿಂದ ಹಲವು ಕಾಯಿಲೆಗಳನ್ನು ನಿಯಂತ್ರಿಸಬಹುದು ಎಂದು ತಿಳಿಸಿದರು.

ಜಿಲ್ಲಾ ಡೇಟಾ ಮ್ಯಾನೇಜರ್ ಮಾದೇಶ್ ರವರು ಮಾತನಾಡಿ, ರಕ್ತದೊತ್ತಡ (ಬಿಪಿ), ಮಧುಮೇಹ (ಶುಗರ್) ಸೇರಿದಂತೆ ವಿವಿಧ ಕಾಯಿಲೆಗಳ ಕುರಿತು ಮಾಹಿತಿ ನೀಡಿದರು. ಕಾಯಿಲೆಗಳು ಹರಡುವ ವಿಧಾನ, ಅವುಗಳ ಮುನ್ನೆಚ್ಚರಿಕೆ ಕ್ರಮಗಳು ಹಾಗೂ ಆರೋಗ್ಯ ಸಂರಕ್ಷಣೆಯ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಸ್ಪಂದನ ಆಸ್ಪತ್ರೆಯ ವೈದ್ಯರಾದ ಡಾ. ವಿಶ್ವನಾಥ್ ಹಾಗೂ ಸಿಬ್ಬಂದಿ ಶಿಬಿರದಲ್ಲಿ ಭಾಗವಹಿಸಿದ ಸಾರ್ವಜನಿಕರಿಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸಿದರು. ಸುಮಾರು 80 ಮಂದಿ ಶಿಬಿರದಲ್ಲಿ ಭಾಗವಹಿಸಿ ಆರೋಗ್ಯ ತಪಾಸಣೆಯ ಪ್ರಯೋಜನ ಪಡೆದುಕೊಂಡರು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಮಣಿಕಂಠ, ವಲಯ ಮೇಲ್ವಿಚಾರಕ ವಿಜಯಕುಮಾರ್, ಸೇವಾ ಪ್ರತಿನಿಧಿಗಳಾದ ವಿಶಾಲಾಕ್ಷಿ, ಗೌರಮ್ಮ, ರವಿಕುಮಾರ್, ಮಂಜು, ಒಕ್ಕೂಟದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಾಲಗಳನ್ನು ಬಲವಂತ ವಸೂಲಿ ಬೇಡ

ಬೆಳೆ, ಕೃಷಿ ಸಂಬಂಧಿತ ಸಾಲಗಳ ವಿಚಾರ: ಜಿಲ್ಲಾಧಿಕಾರಿ ಶ್ರೀರೂಪ ಸೂಚನೆ

ಚಾಮರಾಜನಗರ: ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಸರ್ಕಾರ ಘೋಷಿಸಿರುವ ಹಿನ್ನೆಲೆಯಲ್ಲಿ ಬೆಳೆ ಹಾಗೂ ಕೃಷಿ ಸಂಬಂಧಿತ ಸಾಲಗಳನ್ನು ಬಲವಂತವಾಗಿ ವಸೂಲಿ ಮಾಡಬಾರದು ಎಂದು ಜಿಲ್ಲಾಧಿಕಾರಿ ಶ್ರೀರೂಪ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ರೈತರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ರೈತ ಮುಖಂಡರು ಹಾಗೂ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಾಲ ವಸೂಲಾತಿಗೆ ಒತ್ತಾಯಿಸದಂತೆ ಸೂಚನೆ

ಕೆಲವು ಸಹಕಾರ ಬ್ಯಾಂಕುಗಳಲ್ಲಿ ಸಾಲ ಪಾವತಿಸುವಂತೆ ಒತ್ತಾಯಿಸಲಾಗುತ್ತಿದೆ ಎಂದು ರೈತ ಮುಖಂಡರು ಸಭೆಯ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲೆಯ ಎಲ್ಲ ತಾಲೂಕುಗಳನ್ನು ತೀವ್ರ ಬರಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದೆ. ಬರಗಾಲದ ಹಿನ್ನೆಲೆಯಲ್ಲಿ ಅರ್ಹ ಬೆಳೆ ಸಾಲಗಳು ಹಾಗೂ ಕೃಷಿ ಆಧಾರಿತ ಸಾಲಗಳ ಮರುಪಾವತಿ ಯನ್ನು 12 ತಿಂಗಳ ಕಾಲ ತಾತ್ಕಾಲಿಕವಾಗಿ ಮುಂದೂಡಲಾಗಿದೆ. ಹೀಗಾಗಿ, ರೈತರಿಂದ ಬಲವಂತವಾಗಿ ಸಾಲ ವಸೂಲಾತಿ ಮಾಡಬಾರದು ಎಂದು ಬ್ಯಾಂಕ್ ಸಂಬಂಧಿತ ಅಧಿಕಾರಿಗಳಿಗೆ ಸೂಚಿಸಿದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಗೆ ಸಾಲ ವಸೂ ಲಾತಿಗೆ ಒತ್ತಾಯಿಸದಂತೆ ಸಂಬಂಧಪಟ್ಟ ಅಧಿಕಾರಿಗಳು ನಿರ್ದೇಶನ ನೀಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು, ಹೆಚ್ಚುವರಿ ಜಿಲ್ಲಾಧಿಕಾರಿ ಪ್ರಿಯದರ್ಶಿನಿ, ಮಲೆಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್, ರೈತ ಮುಖಂಡರಾದ ಬಂದಿಗೌಡನಹಳ್ಳಿ ನಟರಾಜ್, ಚಂಗಡಿ ಕರಿಯಪ್ಪ, ಪೃಥ್ವಿ ಸೇರಿದಂತೆ ಇತರ ಮುಖಂಡರು ಹಾಗೂ ರೈತ ಸಂಘ ಟನೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು. ಕೃಷಿ ಇಲಾಖೆ ಜಂಟಿ ನಿರ್ದೇಶಕ ಭಾನುಪ್ರಕಾಶ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಗಿರೀಶ್, ತಹಶೀಲ್ದಾರರಾದ ತನ್ಮಯ್, ಚೈತ್ರ, ನಯನ, ಡಿವೈಎಸ್ಪಿ ಸ್ನೇಹ ರಾಜ್, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯಪಾಲಕ ಎಂಜಿನಿಯರ್ ಪ್ರದೀಪ್, ಲೀಡ್ ಬ್ಯಾಂಕ್ ವ್ಯವಸ್ಥಾಪಕಿ ಸುರೇಖಾ, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಮೈಕ್ರೋ ಫೈನಾನ್ಸ್ ಕಂಪನಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



ರೈತರ ವಿವಿಧ ಸಮಸ್ಯೆಗಳ ಕುರಿತು ಚರ್ಚೆ

ಖಾತೆ ಬದಲಾವಣೆ, ಒತ್ತುವರಿ ತೆರವು, ಮೈಕ್ರೋ ಫೈನಾನ್ಸ್ ಕಂಪನಿಗಳಿಂದ ಆಗುತ್ತಿರುವ ಸಮಸ್ಯೆಗಳು, ಕಾಡುಪ್ರಾಣಿಗಳ ಹಾವಳಿ ತಡೆಯಲು ರೈಲ್ವೆ ಬ್ಯಾರಿಕೇಡ್ ಅಳವಡಿಕೆ, ಬಗರ್ ಹುಕುಂ ಸಾಗುವಳಿ, ಕಾಡುಪ್ರಾಣಿಗಳಿಂದ ಹಾನಿಗೊಳಗಾದ ಬೆಳೆಗಳಿಗೆ ವೈಜ್ಞಾನಿಕ ಪರಿಹಾರ ಹಾಗೂ ಸಮರ್ಪಕ ವಿದ್ಯುತ್ ಪೂರೈಕೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.

ವಿದ್ಯುತ್ ಕಾಮಗಾರಿ ತ್ವರಿತ ಪೂರ್ಣಗೊಳಿಸಲು ಸೂಚನೆ

ಕಾಡಂಚಿನ ಹಲವು ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗಳು ವಿಳಂಬವಾಗುತ್ತಿವೆ ಎಂಬ ದೂರಿಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಯವರು, ಈಗಾಗಲೇ ಹಲವು ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇನೆ. ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ಕಾಡುಪ್ರಾಣಿಗಳ ಹಾವಳಿ ತಡೆಗೆ ಕ್ರಮ

ಹಲವು ಭಾಗಗಳಲ್ಲಿ ಕಾಡುಪ್ರಾಣಿಗಳ ಹಾವಳಿಯಿಂದ ಜನರು ಆತಂಕಕ್ಕೊಳಗಾಗಿದ್ದಾರೆ. ಚಿರತೆ ಹಾಗೂ ಹುಲಿಗಳನ್ನು ಸೆರೆಹಿಡಿಯಲು ಬೋನುಗಳನ್ನು ಇರಿಸುವಂತೆ ಅರಣ್ಯ ಅಧಿಕಾರಿಗಳಿಗೆ ಮನವಿ ಮಾಡುತ್ತಿದ್ದರೂ ವಿಳಂಬ ಧೋರಣೆ ಅನುಸರಿಸಲಾಗುತ್ತಿದೆ ಎಂದು ರೈತ ಮುಖಂಡರು ಸಭೆಯಲ್ಲಿ ಪ್ರಸ್ತಾಪಿಸಿದರು. ಇದಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿಯವರು, ಸಭೆಯಲ್ಲಿ ಹಾಜರಿದ್ದ ಅರಣ್ಯ ಅಧಿಕಾರಿಗಳಿಗೆ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಚಂಗಡಿ ಗ್ರಾಮ ಸ್ಥಳಾಂತರಕ್ಕೆ ಪ್ರತ್ಯೇಕ ಸಭೆ

ಚಂಗಡಿ ಗ್ರಾಮಕ್ಕೆ ಸಂಬಂಧಿಸಿದಂತೆ ಮುಖಂಡ ಕರಿಯಪ್ಪ ಮಾತನಾಡಿ, ಗ್ರಾಮ ಸ್ಥಳಾಂತರದ ಘೋಷಣೆ 2020ರಲ್ಲೇ ಆಗಿದ್ದರೂ ಇದುವರೆಗೆ ಕಾರ್ಯರೂಪಕ್ಕೆ ಬಂದಿಲ್ಲ. ಗ್ರಾಮದಲ್ಲಿ ಮೂಲ ಸೌಕರ್ಯಗಳ ಕೊರತೆಯಿದೆ ಎಂದು ಪ್ರಸ್ತಾಪಿಸಿದರು. ಇದಕ್ಕೆ ಉತ್ತರಿಸಿದ ಜಿಲ್ಲಾಧಿಕಾರಿಯವರು, ಮುಂದಿನ ವಾರವೇ ಚಂಗಡಿ ಗ್ರಾಮದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಸಭೆ ಕರೆ ಯಲಾಗುವುದು. ಹಿರಿಯ ಅರಣ್ಯ ಅಧಿಕಾರಿಗಳು ಸಭೆಯಲ್ಲಿ ಭಾಗವ ಹಿಸಲಿದ್ದು, ಅಲ್ಲಿ ಚರ್ಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಸಾಲ ಮರುಪಾವತಿಗೆ 12 ತಿಂಗಳ ತಾತ್ಕಾಲಿಕ ಮುಂದೂಡಿಕೆ: ರೈತರ ಸಮಸ್ಯೆಗಳ ಕುರಿತು ಅಧಿಕಾರಿಗಳೊಂದಿಗೆ ಸಭೆ

ಅಥ್ಲೆಟಿಕ್ ಕ್ರೀಡಾಕೂಟಕ್ಕೆ ಅ.27ರಂದು ರಾಮನಗರದಲ್ಲಿ ಆಯ್ಕೆ ಪ್ರಕ್ರಿಯೆ

ರಾಮನಗರ: ಹೈದರಾಬಾದ್‌ನಲ್ಲಿ ನವೆಂಬರ್ 14 ರಿಂದ ನ.17 ರವರೆಗೆ ನಡೆಯಲಿರುವ 20ನೇ ರಾಷ್ಟ್ರೀಯ ಅಂತರ್ ಜಿಲ್ಲಾ ಅಥ್ಲೆಟಿಕ್ ಮೀಟ್-2026 ನಿಜ್ಜಮ್ ಸ್ಪರ್ಧೆಯಲ್ಲಿ ಭಾಗವಹಿಸಲು ಕ್ರೀಡಾಪಟುಗಳ ಆಯ್ಕೆ ಪ್ರಕಿಯೆ ಇದೇ ಅಕ್ಟೋಬರ್ 27ರಂದು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ.

14 ಮತ್ತು 16 ವರ್ಷದೊಳಗಿನ ಬಾಲಕ, ಬಾಲಕಿಯರು ಈ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಕ್ರೀಡಾಪಟುಗಳು ಯಾವುದಾದರೂ ಒಂದು ಟ್ರಯಥಾನ್ ವಿಭಾಗದಲ್ಲಿ ಮಾತ್ರ ಭಾಗವಹಿಸಹುದಾಗಿದೆ. ಅಂತರ ಜಿಲ್ಲಾ ಅಥ್ಲೆಟಿಕ್ ಕ್ರೀಡಾಕೂಟದ 14 ವರ್ಷದೊಳಗಿನವರ ವಿಭಾಗದಲ್ಲಿ ಭಾಗವಹಿಸುವ ಬಾಲಕ, ಬಾಲಕಿಯರು 2012ರ ನ.17ರಿಂದ 2014ರ ನ.16ರ ಒಳಗೆ ಜನಿಸಿರಬೇಕು. ಈ ಕ್ರೀಡಾಪಟುಗಳು ಜಾವೆಲಿನ್ ಎಸೆತ ಸ್ಪರ್ಧೆಯಲ್ಲಿ ಭಾಗವಹಿಸುವುದು

ಆನೆ ದಂತ ಮಾರಾಟ ಯತ್ನ: ಇಬ್ಬರ ಬಂಧನ

ಮೈಸೂರು: ಮೈಸೂರು ತಾಲ್ಲೂಕಿನ ಚಿಕ್ಕಹಳ್ಳಿ ಗ್ರಾಮ ವ್ಯಾಪ್ತಿಯ ಶ್ರೀರಾಮ ಬಡಾವಣೆಯ ಮೊಸಂಬಾಯನಹಳ್ಳಿ ರಸ್ತೆಯಲ್ಲಿ ಆಸಾಮಿಗಳು ಆನೆ ದಂತ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದುದ್ದನ್ನು ಪತ್ತೆ ಹಚ್ಚಿ ಆರೋಪಿಗಳಿಂದ ಒಂದು ಆನೆದಂತವನ್ನು ವಶಕ್ಕೆ ಪಡೆಯುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗಳು ಯಶಸ್ವಿಯಾಗಿದ್ದಾರೆ.

ಆನೆದಂತ ಸಾಗಾಣಿಕೆ ಮಾಡಲು ಬಳಸಿದ್ದ ಬಜಾಜ್ ಪಲ್ಸರ್ 220 ಖಿಆ ಬೈಕ್, ಬ್ಯಾಗ್ ಮತ್ತು ಎರಡು ಮೊಬೈಲ್ ಫೋನ್ ಗಳನ್ನು ಅಮಾನತ್ತುಪಡಿಸಿಕೊಂಡಿದ್ದಾರೆ. ಪ್ರಕರಣ ದಾಖಲಿಸಿ ಕೃತ್ಯದಲ್ಲಿ ಭಾಗಿಯಾಗಿರುವ ಹುಣಸೂರು ತಾಲ್ಲೂಕಿನ ಬಲ್ಲೇನಹಳ್ಳಿ ಗ್ರಾಮದ ಜೆ. ರವಿಚಂದ್ರ, ಕ್ಯಾತಮಾರನಹಳ್ಳಿಯ ನಿವಾಸಿ ಜೆ.ರಾಜೇಶ್ ರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಮತ್ತೋರ್ವ ಆರೋಪಿ ತಲೆಮರೆಸಿಕೊಂಡಿರುತ್ತಾನೆ. ಸದರಿ ಪ್ರಕರಣವನ್ನು ಚಾಮರಾಜನಗರ ಅರಣ್ಯ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ.ಎಂ. ಮಾಲತಿಪ್ರಿಯ ಹಾಗೂ ಮೈಸೂರು ಅರಣ್ಯ ಸಂಚಾರಿದಳದ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಿ.ವೈ.ರಾಜು ಮಾರ್ಗದರ್ಶನದಲ್ಲಿ ಆನೆ ಕಾರ್ಯಪಡೆಯ ಎ.ಸಿ.ಎಫ್ ಜಿ.ರುದ್ರೇಶ್, ವಲಯ ಅರಣ್ಯಾಧಿಕಾರಿ ಕೆ.ಸುರೇಂದ್ರ, ಉಪ ವಲಯ ಅರಣ್ಯಾಧಿಕಾರಿ ಟಿ.ಸಿ. ಕನ್ನಿಕಾ, ಎ.ಎಂ. ಸುಮಲತ, ಎಚ್.ಬಿ. ಹೇಮಂತ್ ಕುಮಾರ್, ಕೆ. ಸುರೇಶ್, ಗಸ್ತು ಅರಣ್ಯ ಪಾಲಕ ತಿರುಪತಿ ಪೂಜಾರ, ಸಿದ್ದರಾಜಶೆಟ್ಟಿ ಆರ್. ಇಮಾಮ ಸಾಬ ಸಗರಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

27ರಂದು ಬೃಹತ್ ಪ್ರತಿಭಟನೆ




ಎಚ್.ಡಿ. ಕೋಟೆ: ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್ಐಆರ್) ನೆಪದಲ್ಲಿ ಮತದಾರರ ಹಕ್ಕುಗಳಿಗೆ ಧಕ್ಕೆಯಾಗುವ ಸಾಧ್ಯತೆಯಿದ್ದು, ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಈ ಕ್ರಮವನ್ನು ಖಂಡಿಸಿ ಅ.27ರಂದು ಕೋಟೆ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಮುಂದೆ ಪ್ರಗತಿಪರ ಸಂಘಟನೆಗಳ ಮುಖಂಡರು ಸಭೆ ಸೇರಿ ಮಾತನಾಡಿ, ಮತದಾರರ ಹಕ್ಕುಗಳ ರಕ್ಷಣೆಗಾಗಿ ಎಲ್ಲರೂ ಪ್ರತಿಭಟನೆಯಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದರು.

ಆದಿಕರ್ನಾಟಕ ಮಹಾಸಭಾ ಮಾಜಿ ಅಧ್ಯಕ್ಷ ಎಚ್.ಸಿ.ನರಸಿಂಹಮೂರ್ತಿ ಮಾತನಾಡಿ, ಎಸ್ಐಆರ್‌ನಿಂದ ಆದಿವಾಸಿಗಳು, ಅನಕ್ಷರಸ್ಥರು ಹಾಗೂ ಅಲೆಮಾರಿಗಳು ಅಗತ್ಯ ದಾಖಲೆಗಳನ್ನು ಒದಗಿಸಲಾಗದೆ ಮತದಾರರ ಪಟ್ಟಿಯಿಂದ ಹೆಸರು ಕಳೆದುಕೊಳ್ಳುವ ಆತಂಕವಿದೆ. ಮುಖ್ಯ ಚುನಾವಣಾ ಆಯುಕ್ತರು ರಾಜೀನಾಮೆ ನೀಡುವವರೆಗೂ ಹೋರಾಟ ಮುಂದುವರಿಸಬೇಕು ಎಂದರು. ಪ್ರತಿಭಟನೆಗೆ ಜನರನ್ನು ಸಂಘಟಿಸುವ ಉದ್ದೇಶದಿಂದ ತಾಲೂಕಿನ ಗ್ರಾಮಗಳಲ್ಲಿ ಬೈಕ್ ರ‍್ಯಾಲಿ ಮೂಲಕ ಕರಪತ್ರ ಹಂಚುವ ಕಾರ್ಯಕ್ಕೆ ಚಾಲನೆ ನೀಡಲಾಯಿತು. ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಇದ್ದರು.

ಶಿಬಿರದಲ್ಲಿ ವ್ಯಕ್ತಿತ್ವ ವಿಕಸನ ತರಬೇತಿ



ಎಚ್.ಡಿ.ಕೋಟೆ: ಶಿಕ್ಷಣ ಪೌಂಡೇಷನ್ ವತಿಯಿಂದ ಆಯೋಜಿಸಿದ್ದ ದಸರಾ ಶಿಬಿರದಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಶೈಕ್ಷಣಿಕ ಹಾಗೂ ಕ್ರಿಯಾಶೀಲ ಚಟುವಟಿಕೆಗಳ ಕುರಿತು ಶಿಕ್ಷಕಿ ವಿನುತಾ ತರಬೇತಿ ನೀಡಿದರು.

ಶಿಬಿರದ ಅಂಗವಾಗಿ ಆಟೋಟ, ಪ್ರಬಂಧ, ರಂಗೋಲಿ ಹಾಗೂ ನಿಧಾನ ಸೈಕ್ಲಿಂಗ್ ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ರಂಗೋಲಿ ಸ್ಪರ್ಧೆಯಲ್ಲಿ ಮಾನಸ, ಅಮೃತಾ ಹಾಗೂ ನಂದಿತಾ ಭಾಗವಹಿಸಿ ಗಮನ ಸೆಳೆದರೆ, ನಿಧಾನ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಲೋಹಿತ್, ಉಲ್ಲಾಸ್, ವಿಶ್ವಾಸ್ ತಮ್ಮ ಪ್ರತಿಭೆ ಪ್ರದರ್ಶಿಸಿದರು.

ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವಿ ಹಾಗೂ ಕಂಪ್ಯೂಟರ್ ಆಪರೇಟರ್ ಮಹೇಶ್ ಬಹುಮಾನ ವಿತರಿಸಿದರು. ಗ್ರಂಥಪಾಲಕ ನಾಗರಾಜು, ಶಿಕ್ಷಕಿ ಆಶಾ, ಹಿರೇಹಳ್ಳಿ ಗ್ರಾಮ ಪಂಚಾಯಿತಿ ಅಧಿಕಾರಿ ಜಯರಾಮ್, ಅಂಗನವಾಡಿ ಶಿಕ್ಷಕಿ ದೇವಮ್ಮ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಜ್ಞಾನೇಶ್‌ಕುಮಾರ್ ಪದಚ್ಯುತಿಗೆ ಆಗ್ರಹ

ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ । ಎಸ್ಐಆರ್ ಪ್ರಕ್ರಿಯೆ ಸ್ಥಗಿತಗೊಳಿಸಲು ಆಗ್ರಹ



ಮೈಸೂರು: ಎಸ್ಐಆರ್ ಪ್ರಕ್ರಿಯೆಯನ್ನು ರದ್ದುಗೊಳಿಸುವಂತೆ ಹಾಗೂ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಸಂಯುಕ್ತ ಹೋರಾಟ ಕರ್ನಾಟಕದ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಸಿದ್ಧಾರ್ಥ ನಗರದ ಬುದ್ಧ ಪ್ರತಿಮೆಯಿಂದ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸತ್ಯಾಸತ್ಯತೆ ಅರಿಯದೇ ಬಿಜೆಪಿಯವರೊಂದಿಗೆ ಸೇರಿಕೊಂಟು ಠೀಕೆ, ಟಿಪ್ಪಣಿ ಮಾಡುವಾಗ ಅವರ ಪ್ರಾಮಾಣಿಕತೆ, ದಕ್ಷತೆ, ಉತ್ತಮ ಆಡಳಿತದ ಬಗ್ಗೆ ಅರಿವಿಲ್ಲದಿರಲಿಲ್ಲವೇ ಎಂದು ಪ್ರಶ್ನಿಸಿ, ಈಗ ಸಿದ್ದರಾಮಯ್ಯ ಹಾಗೂ ಸಿಎಂ ಡಿ.ಕೆ. ಶಿವಕುಮಾರ್ ನಡುವೆ ಒಡಕುಂಟು ಮಾಡಲು ಕುಮಾರಸ್ವಾಮಿ ಯತ್ನಿಸುತ್ತ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಇದು ಸಮಯ ಸಾಧಕತನವಾಗಿದೆ ಎಂದು ಟೀಕಿಸಿದರು.

ಬಿ.ಜಿ. ಕೇಶವ, ಕುಕ್ಕರಹಳ್ಳಿ ನಂಜುಂಡಸ್ವಾಮಿ, ಸುನಿಲ್ ಬುದ್ಧ ಭುಗತಗಳ್ಳಿ ಹಾಗೂ ರವಿ ಇದ್ದರು.

ಮತದಾನದ ಹಕ್ಕು ಮರುಸ್ಥಾಪನೆಗೆ ಒತ್ತಾಯ

ಪಾರದರ್ಶಕತೆಯಿಲ್ಲದೆ ಮತದಾರರ ಪಟ್ಟಿಯಿಂದ ಸುಮಾರು 13.41 ಕೋಟಿ ಅರ್ಹ ನಾಗರಿಕರ ಹೆಸರುಗಳನ್ನು ತೆಗೆದುಹಾಕಲಾಗಿದೆ. ಅವರ ಮತದಾನದ ಹಕ್ಕನ್ನು ತಕ್ಷಣವೇ ಪುನಃಸ್ಥಾಪಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. 2023ರ ಚುನಾವಣಾ ಆಯುಕ್ತರ ನೇಮಕಾತಿ ಕಾಯ್ದೆಗೆ ತಿದ್ದುಪಡಿ ತಂದು, ಪ್ರಧಾನಮಂತ್ರಿಗಳು ನಾಮನಿರ್ದೇಶನ ಮಾಡುವ ಕೇಂದ್ರ ಸಚಿವರ ಬದಲಿಗೆ ಭಾರತದ ಮುಖ್ಯ ನ್ಯಾಯಮೂರ್ತಿಗಳನ್ನು ಆಯ್ಕೆ ಸಮಿತಿಯಲ್ಲಿ ಸೇರಿಸಬೇಕು ಎಂದು ಆಗ್ರಹಿಸಿದರು. ದೇಶದಲ್ಲಿ ಅನುಪಾತಾತ್ಮಕ ಪ್ರಾತಿನಿಧ್ಯ ವ್ಯವಸ್ಥೆ ಜಾರಿಗೆ ತರಬೇಕು. ಚುನಾವಣೆಗಳಲ್ಲಿ ಹಣಬಲ ಮತ್ತು ತೋಳ್ಬಲ ತಡೆಯಬೇಕು. ಚುನಾವಣಾ ವೆಚ್ಚವನ್ನು ರಾಜ್ಯದಿಂದಲೇ ಕಾನೂನುಬದ್ಧವಾಗಿ ಒದಗಿಸುವ ವ್ಯವಸ್ಥೆ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ದೆಹಲಿ ಪೊಲೀಸರ ಕ್ರಮಕ್ಕೆ ಖಂಡನೆ

ದೆಹಲಿಯ ಜಂತರ್ ಮಂತರ್‌ನಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುವ ನಾಗರಿಕರ ಹಕ್ಕನ್ನು ನಿರಾಕರಿಸಿರುವ ದೆಹಲಿ ಪೊಲೀಸರ ಕ್ರಮವನ್ನು ಖಂಡಿಸಿದರು. ರಾಷ್ಟ್ರ ರಾಜಧಾನಿಯಲ್ಲಿ ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಹಾಗೂ ಪತ್ರಕರ್ತೆಯರ ಮೇಲೆ ದೆಹಲಿ ಪೊಲೀಸರು ಮತ್ತು ಆಡಳಿತಾರೂಢ ಪಕ್ಷದ ಬೆಂಬಲಿತ ದುಷ್ಕರ್ಮಿಗಳು ಹಲ್ಲೆ, ದೌರ್ಜನ್ಯ ಹಾಗೂ ಲೈಂಗಿಕ ಕಿರುಕುಳ ನಡೆಸಿದ್ದಾರೆ ಎಂದು ಆರೋಪಿಸಿದರು. ಈ ಘಟನೆಗಳು ದೇಶವೇ ತಲೆತಗ್ಗಿಸುವಂತಿದ್ದು, ತಕ್ಷಣವೇ ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಕಾರ್ಯಕರ್ತರ ಹಕ್ಕುಗಳ ಉಲ್ಲಂಘನೆ ಆರೋಪ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನಿರ್ದೇಶನದಂತೆ, ಡಬಲ್ ಎಂಜಿನ್ ಸರ್ಕಾರಗಳು ಆಡಳಿತದಲ್ಲಿರುವ ರಾಜ್ಯಗಳಲ್ಲಿ ಸಾಮಾಜಿಕ ಹಾಗೂ ರಾಜಕೀಯ ಕಾರ್ಯಕರ್ತರ ಮನೆಗಳಿಗೆ ಅಕ್ರಮವಾಗಿ ಪ್ರವೇಶಿಸಿ ಅವರನ್ನು ಗೃಹಬಂಧನದಲ್ಲಿಡಲಾಗುತ್ತಿದೆ ಎಂದು ಪ್ರತಿಭಟನಾಕಾರರು ದೂರಿದರು. ನಾಗರಿಕರ ಖಾಸಗಿತನ, ವೈಯಕ್ತಿಕ ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಉಲ್ಲಂಘಿಸಲಾಗುತ್ತಿದ್ದು, ದೇಶವನ್ನು ಪೊಲೀಸ್ ರಾಜ್ಯವನ್ನಾಗಿ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, ಜಿಲ್ಲಾಧಿಕಾರಿ ಮೂಲಕ ರಾಷ್ಟ್ರಪತಿಗೆ ಹಕ್ಕೊತ್ತಾಯ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಡಾ. ಪೂರ್ಣಾನಂದ, ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ನೆಲೆಹಿನ್ನೆಲೆ ಗೋಪಾಲ್, ಜನಾರ್ದನ್ (ಜೆನ್ನಿ), ಹರಿಹರ ಆನಂದ ಸ್ವಾಮಿ, ಆಲಗೂಡು ಶಿವಕುಮಾರ್, ದೇವಗಳ್ಳಿ ಸೋಮ ಶೇಖರ್, ಮೆಲ್ಲಳ್ಳಿ ನಾರಾಯಣ್, ನ. ದಿವಾಕರ, ಸವಿತಾ ಮಲ್ಲೇಶ್, ಕಲೀಂ ಪಾಷ, ಎನ್. ವಿಜಯ್ ಕುಮಾರ್, ಲ. ಜಗನ್ನಾಥ್, ಚೋರನಹಳ್ಳಿ ಶಿವಣ್ಣ, ಶಂಬುಲಿಂಗಸ್ವಾಮಿ, ಭೂಮಿಗೌಡ, ಕೆ. ಬಸವರಾಜ್, ಬೀರೇಶ್ವರ್, ಕಂದೇಗಾಲ ಶ್ರೀನಿವಾಸ್, ದೇವದಾಸ್, ಸುಶೀಲಾ, ರತಿರಾವ್, ಮಾಳವಿಕ ಗುಬ್ಬಿವಾಣಿ, ಕುಮಾರಸ್ವಾಮಿ, ಶಿವಕುಮಾರ್, ವರಳ್ಳಿ ಆನಂದ್, ಕಲ್ಲಳ್ಳಿ ಕುಮಾರ್, ಜಿ. ರಾಜೇಂದ್ರ ಸೇರಿದಂತೆ ಹಲವರು ಭಾಗವಹಿಸಿದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ

ಎಸ್ಐಆರ್ ಪ್ರಕ್ರಿಯೆಯನ್ನು ತಕ್ಷಣವೇ ಸ್ಥಗಿತಗೊಳಿಸಬೇಕು. ರಾಜ್ಯಾಂಗಬದ್ಧ ಪ್ರಮಾಣವಚನ ಉಲ್ಲಂಘಿಸಿರುವ ಸಿಇಸಿ ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸಿ, ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. 2023ರ ಕಾಯ್ದೆಗೆ ತಿದ್ದುಪಡಿ ತಂದು ಆಯುಕ್ತರ ಆಯ್ಕೆ ಸಮಿತಿಯಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳನ್ನು ಸೇರಿಸಬೇಕು ಎಂದು ಒತ್ತಾಯಿಸಿದರು. ಜಂತರ್ ಮಂತರ್‌ನಲ್ಲಿ ಶಾಂತಿಯುತ ಪ್ರತಿಭಟನೆಗೆ ಅವಕಾಶ ನೀಡಬೇಕು. ವಿದ್ಯಾರ್ಥಿಗಳು ಮತ್ತು ಪತ್ರಕರ್ತೆಯರ ಮೇಲಿನ ದೌರ್ಜನ್ಯಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಕಾರ್ಯಕರ್ತರ ಮನೆಗಳ ಮೇಲಿನ ಅಕ್ರಮ ತಪಾಸಣೆ, ಅಕ್ರಮ ಗೃಹ ಬಂಧನ ಹಾಗೂ ಪೊಲೀಸ್ ದೌರ್ಜನ್ಯಗಳನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಆಗ್ರಹಿಸಿದರು. ಕೇಂದ್ರ ಸರ್ಕಾರ ಪ್ರತಿಭಟನಾಕಾರರ ಮೇಲಿನ ದಮನಕಾರಿ ನೀತಿಯನ್ನು ಮುಂದುವರಿಸಿದರೆ, ದೇಶಾದ್ಯಂತ ರೈತರು, ದಲಿತರು, ಕಾರ್ಮಿಕರು ಸೇರಿದಂತೆ ಎಲ್ಲ ರಂಗಗಳ ನಾಗರಿಕರು ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.



ಶ್ರೀಲಂಕಾ ಭಂತೇಜಿಯಿಂದ ಬೌದ್ಧ ಸಮ್ಮೇಳನಕ್ಕೆ ವಿದ್ಯುಕ್ತ ಚಾಲನೆ

ಚಾಮರಾಜನಗರ, ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ ಇಂದು ಧಮ್ಮದ ಪುಣ್ಯಕ್ಷೇತ್ರವಾಗಿತ್ತು. ಶ್ರೀಲಂಕಾದ ಕೊಲಂಬೊ ವಿಶ್ವವಿದ್ಯಾಲಯದ ಶೀಲವಂಶ ಮಹಾಥೆರೋ ಬಂತೇಜಿ ಅವರು ಮಂತ್ರ ಪಠಿಸಿದಾಗ, ಇಡೀ ಕ್ರೀಡಾಂಗಣ ಮೌನವಾಯಿತು. ಆ ಮೌನದಲ್ಲಿ ಬುದ್ಧ ಇದ್ದ, ನಂತರ ಸಂಗೀತವನ್ನು ಒಳಗೊಂಡ ಪಂಚಶೀಲ ಮತ್ತು ಅಷ್ಟಾಂಗ ಮಾರ್ಗದ ಪಠಣ ಮತ್ತೆ ನೆರೆದ ಜನರನ್ನು ಮೌನಕ್ಕೆ ದೂಡಿತು.

ಬಳಿಕ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಬುದ್ಧನಿಲ್ಲದಿದ್ದರೆ, ನಾನು ಇಂದು ಈ ಸ್ಥಾನದಲ್ಲಿ ಇರುತ್ತಿರಲಿಲ್ಲ. ಅಂಬೇಡ್ಕರ್ ಇಲ್ಲದಿದ್ದರೆ, ನಾವೆಲ್ಲ ಇಲ್ಲಿ ಸೇರುತ್ತಿರಲಿಲ್ಲ. ಯಾವುದೇ ಧರ್ಮದ ಅಡಿಯಲ್ಲಿ ದೇಶ ನಡೆಯಲು ಸಾಧ್ಯವಿಲ್ಲ. ಎಲ್ಲಾ ಧರ್ಮಗಳಿಗೂ ಸಮಾನ ಅವಕಾಶ ನೀಡಿದ ಸಂವಿಧಾನವೇ ನಮಗೆ ಶ್ರೇಷ್ಠವಾಗಬೇಕು ಎಂದರು.

ವೇದಿಕೆಯಲ್ಲಿ ಮೈಸೂರಿನ ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, ಸಚಿವ ಸಿ.ಪುಟ್ಟರಂಗಶೆಟ್ಟಿ, ಸಮ್ಮೇಳನ ಆಚರಣಾ ಸಮಿತಿ ಅಧ್ಯಕ್ಷ ಹಾಗೂ ಶಾಸಕ ಎ.ಆರ್.ಕೃಷ್ಣಮೂರ್ತಿ, ಗೌರವಾಧ್ಯಕ್ಷ ಮನೋರಂಜಿತ ಭಂತೇಜಿ, ಸ್ವಾಗತ ಸಮಿತಿ ಸಂಚಾಲಕ ವೆಂಕಟರಮಣ ಸ್ವಾಮಿ(ಪಾಪು), ಮಾಜಿ ಶಾಸಕರಾದ ಜಿ.ಎನ್.ನಂಜುಂಡಸ್ವಾಮಿ, ಎಸ್.ಬಾಲರಾಜ್, ಆರ್.ನರೇಂದ್ರ, ಎ.ಆರ್.ಬಾಲರಾಜ್, ಮುಖಂಡರಾದ ಅಯ್ಯನಪುರ ಶಿವಕುಮಾರ್, ಎನ್.ನಾಗಯ್ಯ, ಪಿ.ಮರಿಸ್ವಾಮಿ, ಎಸ್ಸಿ ಎಸ್ಟಿ ನೌಕರರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರಯ್ಯ, ಆರ್. ಮಹದೇವ್ ಹಾಗೂ ಇತರರು ಹಾಜರಿದ್ದರು





ಎಚ್ ಡಿಕೆ ಬೆಂಬಲ ಸಿದ್ದುಗೆ ಬೇಕಿಲ್ಲ: ರಾಜೇಶ್



ಮೈಸೂರು: ಮಾಜಿ ಸಿಎಂ ಸಿದ್ದರಾಮಯ್ಯ ಅವರ ತೇಜೋವಧೆಗೆ ಸ್ಟಿಂಗ ಆಪರೇಷನ್ ಮೂಲಕ ಯತ್ನಿಸಿದ ಪ್ರಕರಣ ಕುರಿತು ರಾಜ್ಯ ಸರ್ಕಾರ ಸಮಗ್ರ ತನಿಖೆ ನಡೆಸುತ್ತಿದೆ. ಹೀಗಿರುವಾಗ ಅವರಿಗೆ ಗೋಸುಂಬೆಯಂತಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಬೆಂಬಲ ಬೇಕಿಲ್ಲ ಎಂದು ನಗರ ಜಿಲ್ಲಾ ಕಾಂಗ್ರೆಸ್ ವಕ್ತಾರ ಎಸ್. ರಾಜೇಶ್ ತಿರುಗೇಟು ನೀಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಿದ್ದರಾಮಯ್ಯ ಅವರು ನೀಡಿದ ದೂರಿನ ಮೇರೆಗೆ ಸೂಕ್ತ ತನಿಖೆ ನಡೆಯುತ್ತಿದೆ. ಕುಮಾರಸ್ವಾಮಿ ಅವರ ಬಲಗೈ ಭಂಟ ಹಾಗೂ ಜೆಡಿಎಸ್ ಸಾಮಾಜಿಕ ಜಾಲತಾಣ ನಿರ್ವಹಿಸುವವರಿಗೆ ನೋಟಿಸ್ ನೀಡಿದ್ದರೂ ತನಿಖೆಗೆ ಹಾಜರಾಗಿಲ್ಲ ಹಾಗೂ ಸಹಕರಿಸುತ್ತಿಲ್ಲ. ಹೀಗಾಗಿ ಕೇವಲ ಮಾಧ್ಯಮದ ಮುಂದೆ ಸ್ಟಿಂಗ್ ಆಪರೇಷನ್ ನಡೆಸಿದವರನ್ನು ಬಂಧಿಸಿ ಎಂದು ಕುಮಾರಸ್ವಾಮಿ ಹೇಳುವ ಬದಲು ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿರುವ ದಾಖಲಾತಿಗಳನ್ನು ಪೊಲೀಸರಿಗೆ ನೀಡಲಿ ಎಂದು ಆಗ್ರಹಿಸಿದರು.

ಅಲ್ಲದೆ, ಈಗ ಏಕಾಏಕಿ ಸಿದ್ದರಾಮಯ್ಯ ಅವರ ಬಗ್ಗೆ ಏಕೆ ಪ್ರೀತಿ, ಅಭಿಮಾನವುಂಟಾಗಿದೆ ಎಂಬುದನ್ನು ಅವರು ಕುಮಾರಸ್ವಾಮಿ ತಿಳಿಸಲಿ. ಈ ಹಿಂದೆ ಸಿದ್ದರಾಮಯ್ಯ ಅವರು ಸಿಎಂ ಆಗಿದ್ದಾಗ

ಬೌದ್ಧ ಸಮ್ಮೇಳನಕ್ಕೆ ವೈಭವದ ಚಾಲನೆ

ಚಾಮರಾಜನಗರ,ಜಿಟಿ ಜಿಟಿ ಮಳೆಯ ನಡುವೆಯೂ ಧಮ್ಮಾಸಕ್ತಿ ಕುಂದದೆ, ನಗರದಲ್ಲಿ ಶನಿವಾರ ಬೆಳಗ್ಗೆಯಿಂದಲೇ ಅಂತರಾಷ್ಟ್ರೀಯ ಬೌದ್ಧ ಮಹಾ ಸಮ್ಮೇಳನಕ್ಕೆ ಅದ್ಧೂರಿ ಚಾಲನೆ ಸಿಕ್ಕಿದೆ.

ನಗರದ ರಾಮಸಮುದ್ರ ಬಡಾವಣೆಯ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ಬಳಿ ಮಳೆಯ ನಡುವೆಯೇ ಜಿಲ್ಲಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ ಅವರು "ಧಮ್ಮ ನಡಿಗೆ" ಮೆರವಣಿಗೆಗೆ ಚಾಲನೆ ನೀಡಿದರು. ಜೈ ಭೀಮ್, ಬುದ್ಧಂ ಶರಣಂ ಗಚ್ಛಾಮಿ ಘೋಷಣೆಗಳೊಂದಿಗೆ ನೂರಾರು ಉಪಾಸಕರು, ಬಿಕ್ಕುಗಳು, ಯುವಕರು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ನಗರದ ಬಿ.ರಾಚಯ್ಯ ಜೋಡಿರಸ್ತೆ, ಡಿವಿಯೇಷನ್ ರಸ್ತೆ ಮಾರ್ಗವಾಗಿ ಸಮ್ಮೇಳನ ಆಯೋಜನೆಗೊಂಡಿರುವ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣಕ್ಕೆ ಧಮ್ಮ ನಡಿಗೆ ಜಾಥಾ ತೆರಳಿತು. ನಂತರ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರಿಂದ ಧಮ್ಮ ಧ್ವಜಾರ

ದ್ವಿಚಕ್ರ ವಾಹನ ಬಹಿರಂಗ ಹರಾಜು

ಮೈಸೂರು: ಅಬಕಾರಿ ಪ್ರಕರಣಗಳಲ್ಲಿ ಜಪ್ತುಪಡಿಸಿಕೊಂಡು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿರುವ ಒಂದು ದ್ವಿಚಕ್ರ ವಾಹನದ ಬಹಿರಂಗ ಹರಾಜು ಪ್ರಕ್ರಿಯೆಯು ಅಕ್ಟೋಬರ್ 30 ರಂದು ಬೆಳಿಗ್ಗೆ 11:00 ಗಂಟೆಗೆ ಕೆ.ಆರ್.ನಗರ ವಲಯದ ಅಬಕಾರಿ ನಿರೀಕ್ಷಕರ ಕಛೇರಿಯ ಮುಂಭಾಗದಲ್ಲಿ ಈ ಹರಾಜು ಪ್ರಕ್ರಿಯೆ ನಡೆಯಲಿದೆ. ಹರಾಜಿನಲ್ಲಿ ಭಾಗವಹಿಸಲು ಮತ್ತು ಹೆಚ್ಚಿನ ವಿವರಗಳಿಗಾಗಿ ಕೆ.ಆರ್.ನಗರದ ಅಬಕಾರಿ ನಿರೀಕ್ಷಕರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಕೆ.ಆರ್.ನಗರ ವಲಯದ ಅಬಕಾರಿ ನಿರೀಕ್ಷಕರು ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು: ರೇಷ್ಮೆ ಬೆಳೆಗಾರರಿಗೆ ಗುಣಮಟ್ಟದ ದ್ವಿತಳಿ ಚಾಕಿ ಹುಳುಗಳನ್ನು ಪೂರೈಸುವ ಮತ್ತು ರೇಷ್ಮೆ ಕೃಷಿ ಕ್ಷೇತ್ರಗಳನ್ನು ಸದುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ, ಮೈಸೂರು ವಿಭಾಗದ ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರದಲ್ಲಿ ಚಾಕಿ ಸಾಕಾಣಿಕಾ ಕೇಂದ್ರ ಸ್ಥಾಪಿಸಲು ಅರ್ಜಿ ಆಹ್ವಾನಿಸಲಾಗಿದೆ.

2026–27ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದ ಘೋಷಣೆ (ಪ್ಯಾರಾ–63) ಅಡಿಯಲ್ಲಿ ರೇಷ್ಮೆ ಇಲಾಖೆಯು ಈ ನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇಲಾಖೆಯ ಆಯ್ದ ಕೃಷಿ ಕ್ಷೇತ್ರಗಳಲ್ಲಿ ಲಭ್ಯವಿರುವ ಖಾಲಿ ಜಮೀನಿನಲ್ಲಿ ರೈತ ಉದ್ಯಮಿ ಅಥವಾ ರೈತ ಉತ್ಪಾದಕ ಸಂಸ್ಥೆಗಳ ಸಹಯೋಗದೊಂದಿಗೆ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಆಧಾರದ ಮೇಲೆ ಚಾಕಿ ಸಾಕಾಣಿಕಾ ಕೇಂದ್ರಗಳನ್ನು ಸ್ಥಾಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಪ್ರಸ್ತಾವಿತ ಯೋಜನೆಯಡಿ ಪ್ರಾರಂಭಿಕ ಹಂತವಾಗಿ, ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ತಾಂಡವಪುರ ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರದಲ್ಲಿ ಚಾಕಿ ಸಾಕಾಣಿಕಾ ಕೇಂದ್ರ ಸ್ಥಾಪನೆಗೆ ಲೀಸ್ ಆಧಾರದ ಮೇಲೆ ಭೂಮಿ ನೀಡಲು ತೀರ್ಮಾನಿಸಲಾಗಿದೆ. ನೂಂದಾಯಿತ ದ್ವಿತಳಿ ಚಾಕಿ ಸಾಕಾಣಿಕೆದಾರರು ಇಲ್ಲಿ ದ್ವಿತಳಿ ಚಾಕಿ ಹುಳುಗಳನ್ನು ಸಾಕಿ, ರೈತರಿಗೆ ಸರಬರಾಜು ಮಾಡಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೇಷ್ಮೆ ಜಂಟಿ ನಿರ್ದೇಶಕರ ದೂ ಸಂ:0821–2333750 ನ್ನು ಸಂಪರ್ಕಿಸಬಹುದೆಂದು ರೇಷ್ಮೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ರಥೋತ್ಸವ ಮತ್ತು ತೆಪ್ಪೋತ್ಸವ

ಮೈಸೂರು: ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಚಾಮುಂಡಿಬೆಟ್ಟದ ವತಿಯಿಂದ 2026ನೇ ಸಾಲಿನಲ್ಲಿ ನಡೆಯಲಿರುವ ಪ್ರಮುಖ ಉತ್ಸವಗಳ ವಿವರಗಳು: ಅಕ್ಟೋಬರ್ 24 ರಂದು ಬೆಳಿಗ್ಗೆ 7:55 ರಿಂದ 8:15 ಕ್ಕೆ ರಥೋತ್ಸವವು ಜರುಗಲಿದೆ. ಅಕ್ಟೋಬರ್ 26 ರಂದು ಸಾಯಂಕಾಲ 7:00 ಗಂಟೆಗೆ ದೇವಿಕರೆಯಲ್ಲಿ ತೆಪ್ಪೋತ್ಸವವು ನಡೆಯಲಿದೆ. ಅಕ್ಟೋಬರ್ 28 ರಂದು ಸಂಜೆ 7:00 ಗಂಟೆಗೆ ಮುಡಿಉತ್ಸವಗಳು (ಜವಾಹರಿ) ಜರುಗಲಿವೆ. ಸಾರ್ವಜನಿಕ ಭಕ್ತಾದಿಗಳು ಈ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಶ್ರೀ ಚಾಮುಂಡೇಶ್ವರಿ ಅಮ್ಮನವರ ಕೃಪೆಗೆ ಪಾತ್ರರಾಗುವಂತೆ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅವಧಿ ವಿಸ್ತರಣೆ

ಮೈಸೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ 2026–27ನೇ ಸಾಲಿನ ವಿವಿಧ ಯೋಜನೆಗಳಡಿ ಸೌಲಭ್ಯ ಪಡೆಯಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ವಿಸ್ತರಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ ವಾಸಿಸುವ ಪರಿಶಿಷ್ಟ ಪಂಗಡದ ಫಲಾಪೇಕ್ಷಿಗಳು ಅರ್ಜಿ ಸಲ್ಲಿಸಲು ಈ ಮೊದಲು ಅಕ್ಟೋಬರ್ 17 ರವರೆಗೆ ದಿನಾಂಕವನ್ನು ನಿಗದಿಪಡಿಸಲಾಗಿತ್ತು. ಆದರೆ, ಈಗ ಅರ್ಹ ಅಭ್ಯರ್ಥಿಗಳ ಅನುಕೂಲಕ್ಕಾಗಿ ಈ ಕೊನೆಯ ದಿನಾಂಕವನ್ನು ಅಕ್ಟೋಬರ್ 31 ರವರೆಗೆ ವಿಸ್ತರಿಸಲಾಗಿದ್ದು, ಅರ್ಹ ಫಲಾಪೇಕ್ಷಿಗಳು ನಿಗದಿತ ದಿನಾಂಕದೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಈ ಯೋಜನೆಗಳ ಪ್ರಯೋಜನವನ್ನು ಪಡೆದುಕೊಳ್ಳಬಹುದಾಗಿದೆ ಎಂದು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಡ್ಯ ಜಿಲ್ಲಾ ಬ್ರಾಹ್ಮಣ ಸಭಾ ಚುನಾವಣೆ: ಜಿ.ವಿ. ನಾಗರಾಜು ತಂಡದಿಂದ ಪ್ರಣಾಳಿಕೆ ಬಿಡುಗಡೆ

ಜಿಲ್ಲಾ ಬ್ರಾಹ್ಮಣ ಸಭಾ ಅಭಿವೃದ್ಧಿ ಮಾಡಲು ನಮ್ಮ ತಂಡಕ್ಕೆ ಮತ ನೀಡಿ

ಮಂಡ್ಯ: ಮಂಡ್ಯ ಜಿಲ್ಲಾ ಬ್ರಾಹ್ಮಣ ಸಭಾದ ನಾಲ್ಕು ವರ್ಷಗಳ ಅವಧಿಗೆ ಅ.25 ರ ಭಾನುವಾರ 15 ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಿಗದಿಯಾಗಿದ್ದು, ಬ್ರಾಹ್ಮಣ ಸಭಾ ಅಭಿವೃದ್ಧಿ ಮಾಡಲು ನಮ್ಮ ತಂಡಕ್ಕೆ ಮತ ನೀಡಿ ಎಂದು ಸಂಘದ ಮಾಜಿ ನಿರ್ದೇಶಕ ಜಿ.ವಿ.ನಾಗರಾಜು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಬ್ರಾಹ್ಮಣ ಸಭೆಯು ಸುಮಾರು 50 ವರ್ಷಗಳನ್ನು ಪೂರೈಸಿದ್ದು, ಹಿರಿಯರ ಶ್ರಮದ ಫಲವಾಗಿ ನಗರದ ಬಂದೀಗೌಡ ಲೇಔಟ್ ನಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಆಸ್ತಿಯನ್ನು ಹೊಂದಿದೆ ಎಂದು ಜಿ.ವಿ. ನಾಗರಾಜು ತಿಳಿಸಿದರು.

ಸಭೆಗೆ ಚುನಾವಣೆ ಬೇಡ, ಎಲ್ಲರೂ ಸರ್ವಾನುಮತವಾಗಿ ಆಯ್ಕೆಯಾಗೋಣ ಎಂದು ಒಟ್ಟು 67 ಜನ ಅಭ್ಯರ್ಥಿಗಳಿದ್ದರೂ ಒಮ್ಮತಕ್ಕೆ ಬರಲು ಪ್ರಯತ್ನಿಸಲಾಯಿತು. ಆದರೆ ಕಳೆದ 15 ವರ್ಷಗಳಿಂದ ಅಧಿಕಾರ ನಡೆಸುತ್ತಿರುವ ಬೆಳ್ಳೂರು ಶಿವರಾಂ ತಂಡದ 15 ಜನರು ಚುನಾವಣೆಯೇ ಬೇಕು ಎಂದು ಪಟ್ಟು ಹಿಡಿದ ಪರಿಣಾಮವಾಗಿ ಬ್ರಾಹ್ಮಣ ಸಮಾಜದ ಮೇಲೆ ಸುಮಾರು 3 ಲಕ್ಷಕ್ಕೂ ಮೀರಿ ಖರ್ಚು ಬರುತ್ತಿದೆ. ಅಲ್ಲದೆ ಕಟ್ಟಡಗಳ ನಿರ್ವಹಣೆ ಕೊರತೆಯಿಂದಾಗಿ ಸುಮಾರು 1 ಕೋಟಿ 30 ಲಕ್ಷ ರೂಪಾಯಿ ಕಂದಾಯ ಬಾಕಿ ಉಳಿದಿದೆ ಎಂದು ಅವರು ಆರೋಪಿಸಿದರು.

ನಮ್ಮ ಸಮಿತಿಯಲ್ಲಿ ಪ್ರೊಫೆಸರ್‌ಗಳು, ಪ್ರಾಚಾರ್ಯರು, ಲಾಯರ್‌ಗಳು ಮತ್ತು ವಿದ್ಯಾವಂತ ವ್ಯಾಪಾರಸ್ಥರನ್ನು ಅಭ್ಯರ್ಥಿಗಳನ್ನಾಗಿ ನಿಲ್ಲಿಸಲಾಗಿದೆ. ಇದು ವಿದ್ಯಾವಂತರ ಮತ್ತು ಅನುಭವಸ್ಥರ ತಂಡವಾಗಿದ್ದು ನಮ್ಮ ತಂಡಕ್ಕೆ ಮತ



ನೀಡಿ ಎಂದು ಸಮುದಾಯದಲ್ಲಿ ಮನವಿ ಮಾಡಿದರು.

ಪ್ರಣಾಳಿಕೆ ಬಿಡುಗಡೆ

ತಮ್ಮ ಸಮಿತಿ ಅಧಿಕಾರಕ್ಕೆ ಬಂದರೆ ಯುವಕರಿಗೆ ವೃತ್ತಿ ತರಬೇತಿ ಕಾರ್ಯಕ್ರಮಗಳನ್ನು ನೀಡಿ, ಪ್ರಾರಂಭಿಕ ಬಂಡವಾಳವನ್ನು ಒದಗಿಸಿ ಅವರನ್ನು ಸ್ವಂತ ಉದ್ಯೋಗಕ್ಕೆ ಅಣಿಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ಮಂಡ್ಯ ಜಿಲ್ಲೆಯಲ್ಲಿ ಸುಮಾರು 25 ಸಾವಿರಕ್ಕೂ ಹೆಚ್ಚು ಬ್ರಾಹ್ಮಣರಿದ್ದು, ಅವರಿಗೆ ಅತ್ಯಂತ ಕಡಿಮೆ ದರದಲ್ಲಿ ಬ್ರಾಹ್ಮಣರ ಲೇಔಟ್ ಮಾಡಿಕೊಡಲಾಗುವುದು ಮತ್ತು ಬ್ಯಾಂಕ್ ಸಾಲ ಸೌಲಭ್ಯವನ್ನು ಕಲ್ಪಿಸುವ ವ್ಯವಸ್ಥೆ ಮಾಡಲಾಗುವುದು.ಬ್ರಾಹ್ಮಣ ಸಮಾಜದಿಂದ ವಿದ್ಯಾ ಸಂಸ್ಥೆಗಳನ್ನು ಪ್ರಾರಂಭಿಸುವುದು, ಹಿರಿಯ ನಾಗರಿಕರಿಗೆ ಆರೋಗ್ಯ ಕ್ಯಾಂಪ್‌ಗಳನ್ನು ಆಯೋಜಿಸುವುದು ಹಾಗೂ ಪಿಂಚಣಿಪಡೆದುಕೊಳ್ಳಲು ಸಹಾಯಮತ್ತುಮಾರ್ಗದರ್ಶನ ನೀಡಲು ಹೆಲ್ಪ್ ಡೆಸ್ಕ್ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಪ್ರಸ್ತುತ ಅಂಗವಿಕಲರಿಗೆ ಮತ್ತು ಹಿರಿಯ ನಾಗರಿಕರಿಗೆ ನೀಡುತ್ತಿರುವ 300 ರೂಪಾಯಿ ಪಿಂಚಣಿಯನ್ನು 500 ರೂಪಾಯಿಗೆ ಹೆಚ್ಚಿಸಲಾಗುವುದು.ಬಡ ಬ್ರಾಹ್ಮಣರಿಗಾಗಿ ಉಚಿತ ವೈದ್ಯಾಶ್ರಮವನ್ನು ಪ್ರಾರಂಭಿಸುವುದು ಹಾಗೂ ಪುರುಷರ ಮತ್ತು ಮಹಿಳೆಯರ ಹಾಸ್ಟೆಲ್‌ಗಳನ್ನು ಪುನಃ ಪ್ರಾರಂಭಿಸುವ ಉದ್ದೇಶವಿದೆ. ಹಿರಿಯರು ಕಟ್ಟಿದ ಭವನವನ್ನು ತಿಥಿ ಕಾರ್ಯಕ್ರಮಗಳನ್ನು ಮಾಡಲು ಪ್ರಾಯಶಃ ಉಚಿತವಾಗಿ ಅಥವಾ ಕೇವಲ ಮೆಂಟೆನೆನ್ಸ್ ಚಾರ್ಜ್ ಪಡೆದುಕೊಂಡು ನೀಡುವ ವ್ಯವಸ್ಥೆ ಮಾಡಲಾಗುತ್ತದೆ. ಉದ್ಯೋಗಸ್ಥ ಮಹಿಳೆಯರಿಗೆ ಪಿ.ಜಿ. ಸೌಲಭ್ಯವನ್ನು ಒದಗಿಸಲಾಗುವುದು.ವಿದ್ಯಾಭ್ಯಾಸಕ್ಕೆ ತೊಂದರೆಯಲ್ಲಿರುವವರಿಗೆ ಹಾಗೂ ನಿಧನರಾದ ಸಂದರ್ಭದಲ್ಲಿ ಅಂತ್ಯಕ್ರಿಯೆ ಮತ್ತು ಕ್ರಿಯಾ ಕರ್ಮಗಳನ್ನು ಮಾಡಲು ಹಣವಿಲ್ಲದ ಬಡ ಬ್ರಾಹ್ಮಣರಿಗೆ ಸಂಘದಿಂದ ಧನ ಸಹಾಯವನ್ನು ಒದಗಿಸಲಾಗುವುದು. ಎಲ್ಲಾ ತಾಲ್ಲೂಕು ಸಂಘಗಳ ಸದಸ್ಯರನ್ನು ಒಳಗೊಂಡು, ತಾಲ್ಲೂಕುಗಳಲ್ಲಿ ಕಟ್ಟಡ ಕಟ್ಟಲು ಮುಂದಾಗುವವರಿಗೆ ಜಿಲ್ಲಾ ಸಂಘದಿಂದ ಚಿತ್ತಾವಾರು 5 ಲಕ್ಷ ರೂಪಾಯಿ ಹಾಗೂ ಪ್ರತಿ ತಾಲ್ಲೂಕು ಸಂಘಕ್ಕೆ ವರ್ಷಕ್ಕೆ 1 ಲಕ್ಷ ರೂಪಾಯಿ ನೀಡಲು ತೀರ್ಮಾನಿಸಲಾಗಿದೆ. ಹಿರಿಯರ ಸಲಹಾ ಸಮಿತಿಯನ್ನು ರಚಿಸಿ ಪ್ರತಿ 2 ರಿಂದ 3 ತಿಂಗಳಿಗೊಮ್ಮೆ ಸಭೆ ನಡೆಸಿ ಸಲಹೆ ಪಡೆಯಲಾಗುವುದು ಎಂದು ಭರವಸೆ ನೀಡಿದರು.

ತಾನು ರಾಜಕಾರಣಿಯಲ್ಲ, ಸಮಾಜ ಸೇವಕನಾಗಿದ್ದು, ಎಲ್ಲಾ ರಾಜಕೀಯ ಪಕ್ಷಗಳ ಹಾಗೂ ಸಂಘಟನೆಗಳ ಸಂಪರ್ಕವನ್ನು ಹೊಂದಿದ್ದು, ಬ್ರಾಹ್ಮಣ ಸಂಘಕ್ಕೆ ಬೇಕಾದ ಅನುದಾನಗಳನ್ನು ತರಲು ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು.

ನಮ್ಮ ತಂಡದ ಅಭ್ಯರ್ಥಿಗಳು: ನಮ್ಮ ತಂಡದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಭಾಗವಹಿಸುವವರ ಜೊತೆಗೆ ಎಸ್. ವಿ. ನಾಗೇಶ್ ರಾವ್, ಎಸ್ .ಆರ್ .ರಾಘವೇಂದ್ರ ಪ್ರಸಾದ್ ,ವೆಂಕಟರಾಮನ್ . ಆರ್, ಎಸ್ .ಶ್ರೀನಿವಾಸನ್ ,ಎಸ್ .ಕೆ .ಸೀತಾರಾಮ್ ,ಶ್ರೀಮತಿ ಭಾರತಿ ಬಾಬು ಎಸ್ ಜಿ. ಮೈಥಿಲಿ ನಾಗರಾಜು ಸ್ಪರ್ಧಿಸಿದ್ದಾರೆ ಎಂದು ತಿಳಿಸಿದರು

ಪತ್ರಿಕಾಗೋಷ್ಠಿಯಲ್ಲಿ ಎನ್.ರಮೇಶ್, ಜಿ.ಬಿ.ಅರುಣಪ್ರಸಾದ್, ಪದ್ಮಶ್ರೀನಿವಾಸ್, ಜಿ.ವಿ.ಕುಮಾರ್, ಬಿ.ಎಸ್.ಶಿವಕುಮಾರ್, ಚೇತಕ್ ಎನ್.ಎಸ್ ಮತ್ತು ಬಾಲಸುಬ್ರಹ್ಮಣ್ಯ ಅವರು ಭಾಗವಹಿಸಿದ್ದರು.

10ನೇ ತರಗತಿಯ ವಿದ್ಯಾರ್ಥಿಗಳಿಗೆ ಟ್ಯೂಷನ್ ಕಾರ್ಯಕ್ರಮಕ್ಕೆ ಚಾಲನೆ

ಕೆ.ಆರ್.ನಗರ: ಪ್ರತಿಯೊಬ್ಬ ವಿದ್ಯಾರ್ಥಿಗಳು ತಮ್ಮ ಕಲಿಕಾ ಅವಧಿಯಲ್ಲಿ ಚೆನ್ನಾಗಿ ಕಲಿತು ಉನ್ನತ ಸ್ಥಾನಮಾನಗಳನ್ನು ಅಲಂಕರಿಸಬೇಕು ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ಯೋಜನಾಧಿಕಾರಿ ಉಮೇಶ್ ಪೂಜಾರಿ ಹೇಳಿದರು.

ಅವರು ಸಾಲಿಗ್ರಾಮ ತಾಲೂಕಿನ ಕಾಳಮ್ಮನ ಕೊಪ್ಪಲು ಸರ್ಕಾರಿ ಪ್ರೌಢಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಹಮ್ಮಿಕೊಂಡಿರುವ ಟ್ಯೂಷನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಶಾಲೆಗಳಲ್ಲಿ ದೊರೆಯುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಉತ್ತಮವಾಗಿ ವಿದ್ಯಾಭ್ಯಾಸ ಮಾಡಬೇಕು ಎಂದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನ ಮಾಡಲಾಗುತ್ತಿದೆ. ಶಿಕ್ಷಣ ಕ್ಷೇತ್ರಕ್ಕೂ ಹೆಚ್ಚಿನ



ಆದ್ಯತೆಯನ್ನು ನೀಡಿ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯದಲ್ಲಿ ಹೆಚ್ಚಿನ ಅನುಕೂಲವಾಗುವಂತೆ ವಿಶೇಷವಾಗಿ ಶಿಕ್ಷಕರುಗಳನ್ನು ನೇಮಿಸಿ ವಿದ್ಯಾರ್ಥಿಗಳಿಗೆ ಕಲಿಕಾ ಚಟುವಟಿಕೆಗಳನ್ನು ಮಾಡಿಸುವ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ. ಇದನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಂಡು ಉತ್ತಮವಾಗಿ ಕಲಿತು ಉನ್ನತ ಸ್ಥಾನಗಳಲ್ಲಿ ಉತ್ತೀರ್ಣರಾಗಬೇಕು. ಆ ಮೂಲಕ ಕಲಿಸಿದ ಗುರುಗಳಿಗೆ, ಹೆತ್ತ ತಂದೆ ತಾಯಿಗಳಿಗೆ ಮತ್ತು ಹುಟ್ಟಿದ ಊರಿಗೆ ಕೀರ್ತಿಯನ್ನು ತರಬೇಕು ಎಂದರು.

ಕಾರ್ಯಕ್ರಮದಲ್ಲಿ ಕರುನಾಡ ದೀಪ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಟಿ.ಮೋಹನ್ ಕುಮಾರ್, ಮುಖ್ಯ ಶಿಕ್ಷಕ ಎಚ್.ಎಸ್.ಜಗದೀಶ್, ಶಿಕ್ಷಕರಾದ ಹೆಚ್.ಟಿ.ಕೃಷ್ಣ, ಹರೀಶ್, ಅಭಿಷೇಕ್, ಜ್ಞಾನವಿಕಾಸ ಸಮನ್ವಯಾಧಿಕಾರಿ ಶೀಲವತಿ, ಮೇಲ್ವಿಚಾರಕ ನಾಗರಾಜ್, ಸೇವಾ ಪ್ರತಿನಿಧಿ ಬಸವರಾಜು, ವಿದ್ಯಾರ್ಥಿಗಳು ಇದ್ದರು.

ಅರ್ಜಿ ಆಹ್ವಾನ

ಮಡಿಕೇರಿ: ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯಲ್ಲಿ 2026 ರ ಡಿಸೆಂಬರ್, 23 ರಿಂದ 25 ರಂದು ಬಾಗಲಕೋಟೆಯ ಉದ್ಯಾನಗಿರಿಯ ಮುಖ್ಯ ಆವರಣದಲ್ಲಿ "ಹವಾಮಾನ ವೈಪರಿತ್ಯದಲ್ಲಿ ಸುಸ್ಥಿರ ತೋಟಗಾರಿಕೆ" ಎಂಬ ಧ್ಯೇಯದೊಂದಿಗೆ 'ತೋಟಗಾರಿಕೆ ಮೇಳ–2026'ವನ್ನು ಹಮ್ಮಿಕೊಳ್ಳಲಾಗಿದೆ.

ಈ ತೋಟಗಾರಿಕೆ ಮೇಳದಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯದ 25 ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೆ ಒಬ್ಬ ಶ್ರೇಷ್ಠ ತೋಟಗಾರಿಕೆ ರೈತ/ರೈತ ಮಹಿಳೆ ಆಯ್ಕೆ ಮಾಡಿ ಸೂಕ್ತ ಬಹುಮಾನದೊಂದಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು.

ಈ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಲು ಬಯಸುವ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳ ತೋಟಗಾರಿಕೆ ರೈತ/ರೈತ ಮಹಿಳೆಯರು ಅರ್ಜಿ ನಮೂನೆಯನ್ನು ಡೀನ್, ತೋಟಗಾರಿಕೆ ಮಹಾವಿದ್ಯಾಲಯ, ಯಲಚಹಳ್ಳಿ, ಇಲವಾಲ, ಮೈಸೂರು 571130 ಇಲಾಖೆಯಿಂದ ಅಥವಾ ತೋ.ವಿ.ವಿ.ಯ ವೆಬ್‌ಸೈಟ್: www.uhsbagalkot.karnataka.gov.in ಮೂಲಕ ಪಡೆದುಕೊಳ್ಳಬಹುದು.

ಭರ್ತಿ ಮಾಡಿದ ಅರ್ಜಿಯನ್ನು ನವೆಂಬರ್, 09 ರ ಸಂಜೆ 5 ಗಂಟೆಯೊಳಗೆ ಡೀನ್, ತೋಟಗಾರಿಕೆ ಮಹಾವಿದ್ಯಾಲಯ, ಯಲಚಹಳ್ಳಿ, ಇಲವಾಲ, ಮೈಸೂರು 571130, ಇವರಿಗೆ ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ 8147959226 / 9341997297 ಈ ನಂಬರುಗಳಿಗೆ ಕರೆ ಮಾಡಬಹುದು.

ಜಾನಪದ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಯಶಸ್ವಿ

ಯುವ ಜನಾಂಗಕ್ಕೆ ಜಾನಪದ ಕ್ಷೇತ್ರದಲ್ಲಿ ಆಸಕ್ತಿಯೇ ಇಲ್ಲದಿರುವುದು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಸಂಗತಿ : ಡಾ. ಕೆ.ಎಂ.ವಸುಂಧರಾ

ಮಂಡ್ಯ: ಪ್ರಸ್ತುತ ಸಮಾಜದಲ್ಲಿ ಕಿರುತೆರೆ ಸೆಲೆಬ್ರಿಟಿಗಳಿಗೆ ಸಿಗುವಷ್ಟು ಮನ್ನಣೆ ನಿಜವಾದ ಜಾನಪದ ಕಲಾವಿದರಿಗೆ ಸಿಗುತ್ತಿಲ್ಲ, ದಸರಾದಂತಹ ದೊಡ್ಡ ವೇದಿಕೆಗೆ ಯುವಕರನ್ನು ಕರೆತರಲು ಹೇಳಿದರೆ ಯುವ ಜನಾಂಗವೇ ಸಿಗುತ್ತಿಲ್ಲ, ಬಂದವರೆಲ್ಲ 50 ವರ್ಷ ದಾಟಿದ ಹಿರಿಯ ಕಲಾವಿದರು, ಅವರಲ್ಲಿರುವ ಅದ್ಭುತ ಲಯ, ಜ್ಞಾನವನ್ನು ಮುಂದಿನ ಪೀಳಿಗೆಗೆ ದಾಟಿಸಲು ಯುವಕರು ಇಲ್ಲದಿರುವುದು ಬೇಸರದ ಸಂಗತಿ.ಈ ಬಗ್ಗೆ ಆತ್ಮವಿಮರ್ಶೆ ಅಗತ್ಯ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ. ಕೆ.ಎಂ.ವಸುಂಧರಾ ಅವರು ಕಳವಳ ವ್ಯಕ್ತಪಡಿಸಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಜಾನಪದ ಅಕಾಡೆಮಿ ಬೆಂಗಳೂರು ಹಾಗೂ ಕರ್ನಾಟಕ ಜಾನಪದ

ಸಾವಿಲ್ಲದ ಬೆಳಕಾಗುವುದು ಹೇಗೆ?



ಮೌಲ್ಯಗಳನ್ನು ಮುಂದಿನ ತಲೆಮಾರಿಗೆ ದಾಟಿಸುವುದೇ ನಿಜವಾದ ಪರಂಪರೆ. ಅದು ವ್ಯಕ್ತಿಯ ಆಯಸ್ಸನ್ನು ಮೀರಿ ಉಳಿಯುವ ಪರಿಮಳ.

ದೇಹದ ಆರೋಗ್ಯದಷ್ಟೇ ಮನಸ್ಸಿನ ಉದ್ದೇಶವೂ ಮುಖ್ಯ. ಸ್ಪಷ್ಟ ಗುರಿಯಿರುವವರು ನೋವನ್ನು ಪಾಠವಾಗಿಸಿ, ಸೋಲನ್ನು ಮೆಟ್ಟಿಲಾಗಿಸುತ್ತಾರೆ.

ಕೊನೆಗೆ ಸಾವನ್ನು ಗೆಲ್ಲುವುದು ದೇಹವಲ್ಲ, ಕೃತಿ. ಜೀವನವನ್ನು ಮೌಲ್ಯಯುತ ಕಾರ್ಯಗಳಿಂದ ತುಂಬಿದಾಗ ಕಾಲದ ಮಿತಿಯೂ ಕರಗುತ್ತದೆ. ವ್ಯಕ್ತಿ ಮರೆಯಾಗಬಹುದು, ಆದರೆ ಅವನು ಹಚ್ಚಿದ ಚಿಂತನೆಯ ದೀಪ, ಮಾಡಿದ ಸೇವೆ ಮತ್ತು ಬೆಳೆಸಿದ ಸತ್ಸಂಸ್ಕಾರ ಸಮಾಜದಲ್ಲಿ ಬಹುಕಾಲ ಬೆಳಗುತ್ತಲೇ ಇರುತ್ತದೆ.



ಅಂಕಣ- 52

ಸಾವು ಸಂಕಟಪಡುವ ಸಂಗತಿಗಳು..!

ಡಾ.ಸುಧಾಕರ.ಜಿ.ಲಕ್ಕವಳ್ಳಿ
87479 69381

ಮನುಷ್ಯನ ಕೈಯಲ್ಲಿ ಆಯಸ್ಸಿನ ಅಳತೆಯಿಲ್ಲ, ಆದರೆ ಆಯಸ್ಸಿನ ಆಳವನ್ನು ರೂಪಿಸುವ ಕಲೆ ಇದೆ. ಆಧುನಿಕ ನರವಿಜ್ಞಾನ ಹೇಳುವಂತೆ ಮೆದುಳು ಬಳಕೆಯಿಂದ ಬಳಲುವುದಿಲ್ಲ, ಬಳಕೆಯಿಂದ ಬೆಳಗುತ್ತದೆ. ನಿರಂತರ ಕಲಿಕೆ, ಕುತೂಹಲ, ಸೃಜನಶೀಲತೆ ಹೊಸ ನರಸಂಪರ್ಕಗಳನ್ನು ಸೃಷ್ಟಿಸುತ್ತದೆ. ಹೊಸ ಕೌಶಲ್ಯ ಕಲಿಯುವ ದಾಹವೇ ವಯಸ್ಸಿನ ವೇಗವನ್ನು ತಗ್ಗಿಸಿ, ನೆನಪು ಮತ್ತು ಚಿಂತನೆಗೆ ಚಿರಯೌವನ ನೀಡುತ್ತದೆ.

ಬದುಕು ಸಾರ್ಥಕವಾಗುವುದು ಬೇರೆಯವರ ಬದುಕಿಗೆ ಉಪಯುಕ್ತವಾದಾಗ. ತಾನು ಗಳಿಸಿದ ಜ್ಞಾನವನ್ನು ಹಂಚುವುದು, ಕಿರಿಯರಿಗೆ ದಾರಿದೀಪವಾಗುವುದು, ಪ್ರಕೃತಿಯನ್ನು ಕಾಪಾಡುವುದು ಮತ್ತು

ಕರ್ಮದ ರಿಟರ್ನ್ ಗ್ಯಾರಂಟಿ, ವೇಗ ಮಾತ್ರ ರಾಕೆಟ್ ಸ್ಪೀಡ್!





ಅಪೂರ್ವ ಸಾಲ್ಯಾನ್ ಪೆರಿಂಜೆ

ಹಿಂದೆ ಒಂದು ಮಾತಿತ್ತು "ಅಪ್ಪ ಮಾಡಿದ ಕರ್ಮವನ್ನು ಮಗ ಅನುಭವಿಸುತ್ತಾನೆ" ಎಂದು. ಆದರೆ ಈಗ ಕಾಲ ಬದಲಾಗಿದೆ. ಕರ್ಮದ ಪ್ರತಿಫಲವೂ ಯುಪಿಐ ಮೂಲಕ ಹಣ ವರ್ಗಾವಣೆಯಾದಂತೆ ಕ್ಷಣಾರ್ಧದಲ್ಲೇ ನಮ್ಮನ್ನು ತಲುಪುತ್ತದೆ! ಅದು ಅಪ್ಪನ ಕರ್ಮ ಮಗನಿಗೆ ಬರುವುದಲ್ಲ; ನಾವು ಮಾಡಿದ ಕರ್ಮದ ಫಲವನ್ನು ನಾವೇ ಅನುಭವಿಸಬೇಕಾಗುತ್ತದೆ.

ಕೆಲವೊಮ್ಮೆ ಬೇರೆಯವರನ್ನು ಅಣಕಿಸುವುದು, ಅವರ ನೋವನ್ನು ಕಂಡು ನಗುವುದು ಬಹಳ ಸುಲಭವೆನಿಸುತ್ತದೆ. ಆದರೆ ಅದೇ ಪರಿಸ್ಥಿತಿಯಲ್ಲಿ ನಾವು ನಿಂತಾಗ ಅದರ ನೋವು ಎಷ್ಟು ಕಠಿಣ ಎಂಬುದು ಅರಿವಾಗುತ್ತದೆ.

ನನ್ನ ಜೀವನದಲ್ಲಿಯೂ ಕರ್ಮದ ನೇರ ದರ್ಶನ ಮಾಡಿಸಿದ ಒಂದು ಹಾಸ್ಯಮಯ ಘಟನೆ ಶಾಲಾ ದಿನಗಳಲ್ಲಿ ನಡೆದಿತ್ತು.

ಪ್ರತಿದಿನ ಬೆಳಿಗಿನ ಪ್ರಾರ್ಥನೆ ಮುಗಿದ ಬಳಿಕ ಸರತಿ ಸಾಲಿನಲ್ಲಿ ತರಗತಿಗಳಿಗೆ ತೆರಳುತ್ತಿದ್ದೆವು. ಒಂದು ದಿನ ನನ್ನ ಸಹಪಾಠಿಯೊಬ್ಬಳ ತಲೆಯ ಮೇಲೆ ಜಿರಳೆಯೊಂದು ಹರಿದಾಡುತ್ತಿತ್ತು. ಅದನ್ನು ಕಂಡ ನಾನು ಸುಮ್ಮನಿರದೆ ಎಲ್ಲರ ಗಮನಕ್ಕೂ ತಂದೆ. ಎಲ್ಲರೂ ಆಕೆಯನ್ನು ನೋಡಿ ನಗುವಂತೆ ಮಾಡಿದೆ. ಪಾಪ! ಆಕೆ ಮಾತ್ರ ಮುಜುಗರದಿಂದ ತಲೆತಗ್ಗಿಸಿ ನಿಂತಿದ್ದಳು. ಆಗ ಬೇರೆಯವರ ಮನಸ್ಸಿಗೆ ನೋವಾಗುತ್ತದೆ ಎಂಬ ಅರಿವು ನನಗಿರಲಿಲ್ಲ.

ಆದರೆ ಮರುದಿನ ಅದೇ ಸರತಿ ಸಾಲಿನಲ್ಲಿ ನಾನು ಹೋಗುತ್ತಿದ್ದಾಗ ಎಲ್ಲರೂ ನನ್ನನ್ನು ನೋಡಿ ನಗಲಾರಂಭಿಸಿದರು. ನನಗೇನೂ ಅರ್ಥವಾಗಲಿಲ್ಲ. ಏಕೆ ಎಲ್ಲರೂ ನನ್ನನ್ನು ನೋಡಿ ನಗುತ್ತಿದ್ದಾರೆ ಎಂದು ಯೋಚಿಸುತ್ತಿದ್ದಾಗ, ನನ್ನ ತಲೆಯ ಮೇಲೂ ಜಿರಳೆಯೊಂದು ಹರಿದಾಡುತ್ತಿರುವುದು ತಿಳಿಯಿತು!

ಅಷ್ಟೇ! ಹಿಂದಿನ ದಿನದ ಘಟನೆ ಕ್ಷಣಾರ್ಧದಲ್ಲಿ ನೆನಪಿಗೆ ಬಂತು. ನಾನು ಆಕೆಯನ್ನು ಅಣಕಿಸಿ ನಗಿಸಿದ್ದ ದೃಶ್ಯ ಕಣ್ಣಮುಂದೆ ಬಂದಿತು. ಆಗಲೇ ನನ್ನ ತಪ್ಪಿನ ಅರಿವಾಯಿತು. ನಿನ್ನೆ ನಾನು ಬೇರೆಯವರ ಮುಜುಗರಕ್ಕೆ ಕಾರಣವಾಗಿದ್ದೆ; ಇಂದು ಅದೇ ಪರಿಸ್ಥಿತಿ ನನ್ನದಾಗಿತ್ತು.

ಆ ಸಣ್ಣ ಘಟನೆಯೇ ನನಗೆ ಜೀವನದ ದೊಡ್ಡ ಪಾಠವೊಂದನ್ನು ಕಲಿಸಿತು. ಬೇರೆಯವರ ನೋವಿನಲ್ಲಿ ನಗುವ ಮೊದಲು, ಅದೇ ನೋವು ನಮಗಾದರೆ ಹೇಗಿರುತ್ತದೆ ಎಂದು ಯೋಚಿಸಬೇಕು.

ಕರ್ಮ ಎನ್ನುವುದು ಚಿಕ್ಕದಾಗಿರಲಿ, ದೊಡ್ಡದಾಗಿರಲಿ, ಅದರ ಪ್ರತಿಫಲ ಯಾವಾಗ, ಹೇಗೆ ನಮ್ಮನ್ನು ತಲುಪುತ್ತದೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲ. ಆದ್ದರಿಂದ ಯಾರನ್ನೂ ಅಣಕಿಸದೆ, ಯಾರ ಮನಸ್ಸನ್ನೂ ನೋಯಿಸದೆ, ಸಾಧ್ಯವಾದಷ್ಟು ಒಳ್ಳೆಯದನ್ನೇ ಮಾಡುತ್ತಾ ಬದುಕಬೇಕು. ಏಕೆಂದರೆ, ಕರ್ಮದ ಲೆಕ್ಕಾಚಾರದಲ್ಲಿ ವಿಳಂಬವಿರಬಹುದು; ಆದರೆ ನಮ್ಮ ಕೃತ್ಯಗಳ ಪರಿಣಾಮವನ್ನು ಎದುರಿಸುವ ಜವಾಬ್ದಾರಿ ಮಾತ್ರ ನಮ್ಮದೇ!



ಮೂಲವ್ಯಾಧಿ ಮನೆ ಮದ್ದು

ತುಳಸಿ ಎಲೆ, ಕರಿಮೆಣಸು, ಹಸಿಈರುಳ್ಳಿ3,ಸಮಪ್ರಮಾಣದಲ್ಲಿ ನುಣ್ಣಗೆ ಅರೆದುಗೋಲಿಗಾತ್ರದ ಉಂಡೆಮಾಡಿ ಬೆಳಿಗ್ಗೆ 2–2 ತಿನ್ನುತ್ತಾ ಬಂದರೆ, 5 –6 ದಿನಗಳಲ್ಲಿ ಮೂಲವ್ಯಾಧಿ ಕಡಿಮೆಯಾಗುವುದು.

ಆಸನದಲ್ಲಿ ಆಗುವ ಉರಿ, ನೋವು ಇಂತಹ ಸಮಸ್ಯೆಗೆ ನೇರಳೆ ಮರದ ಎಲೆ ಹಾಗೂ ಮಾವಿನಎಲೆಯನ್ನು ನೀರಿನಲ್ಲಿ ಹಾಕಿ ಕುದಿಸಿ, ಆ ನೀರನ್ನು ಬೇರೆ ಬಿಸಿನೀರಿಗೆ ಹಾಕಿ 1 ಟಬ್‌ನಲ್ಲಿ ಹಾಕಿ 5 ನಿಮಿಷ ಕುಳಿತರೆ ನೋವು ಕಡಿಮೆಯಾಗುತ್ತದೆ.

ಮಲದ ಜೊತೆ ರಕ್ತ ಹೋಗುತ್ತಿದ್ದರೆ, ನಿಂಬೆಗಿಡದ ಹೂಮತ್ತು ಬೇರನ್ನು ಅರೆದು, ಅಕ್ಕಿತೊಳೆದನೀರಿನಲ್ಲಿ ಕದಡಿ ಕುಡಿದರೆ ಅನುಕೂಲವಾಗುತ್ತದೆ.

ಸಿಹಿಗುಂಬಳದಬಿಗುರೆಲೆಗಳನ್ನು ಅಡುಗೆಯಲ್ಲಿ ಬಳಸುವುದು ಹಾಗೂ ಸಿಹಿಗುಂಬಳದ ಬಳಕೆ ಎರಡೂಮೂಲವ್ಯಾಧಿಯವರಿಗೆ ಹಿತಕರ.

ನುಗ್ಗೆ ಎಲೆ ಹಾಗೂ ಎಕ್ಕದ ಎಲೆಯನ್ನು ನುಣ್ಣಗೆ ಅರೆದು ಮೂಲವ್ಯಾಧಿಯ ಮೊಳಕೆಗಳಿಗೆ ಲೇಪಿಸುವುದರಿಂದಮೊಳಕೆಗಳು ದಿನಕ್ರಮೇಣ ನಾಶವಾಗುತ್ತವೆ.



ಸುವರ್ಣಗೆಡ್ಡೆಯನ್ನು ಒಣಗಿಸಿ ಪುಡಿಮಾಡಿಟ್ಟುಕೊಂಡು ಈ ಪುಡಿಯನ್ನು ಹಸಿಮೂಲಂಗಿ ರಸದಲ್ಲಿ ಬೆರೆಸಿ ಪ್ರತಿನಿತ್ಯ ಕೆಲವು ದಿನಗಳ ಕಾಲ ಸತತವಾಗಿ ಸೇವಿಸುವುದರಿಂದಮೂಲವ್ಯಾಧಿ ಹಾಗೂ ಮಲಬದ್ಧತೆ ನಿವಾರಣೆಯಾಗುತ್ತದೆ.

ಹೊನಗೊನೆಸೊಪ್ಪು ಹಾಗೂ ಮೂಲಂಗಿಸೊಪ್ಪಿನ ರಸವನ್ನು ಸತತವಾಗಿ ಸೇವಿಸುವುದರಿಂದ ಮೂಲವ್ಯಾಧಿಯ ಹಿಂಸೆ, ನೋವು ಕಡಿಮೆಯಾಗುತ್ತದೆ.

ಒಣಖರ್ಜೂರ ಹಾಗೂ ಒಣದ್ರಾಕ್ಷಿ ಎರಡನ್ನೂ ಚೆನ್ನಾಗಿ ಕುದಿಸಿ ಕಷಾಯ ಮಾಡಿ ಆರಿದ ನಂತರ ಚೆನ್ನಾಗಿ ಕಿವುಚಿ, ನಂತರ ಶೋಧಿಸಿ, ಪುನ: ಆರಿಸಿ ಗಾಜಿನ ಸೀಸೆಗೆ ಹಾಕಿಟ್ಟುಕೊಂಡು ಇದನ್ನು 21 ದಿನಗಳ ಕಾಲ ಕುಡಿದರೆ, ಮಲಬದ್ಧತೆ, ಮೂಲವ್ಯಾಧಿ ಎಲ್ಲಕ್ಕೂ ಉತ್ತಮ ಪರಿಹಾರ ಸಿಗುತ್ತದೆ.

ರಕ್ತಮೂಲವ್ಯಾಧಿ: ಹಾಗಲಕಾಯಿ ರಸ ಅಥವಾ ಹಾಗಲಕಾಯಿ ಎಲೆರಸಕ್ಕೆ ಕಲ್ಲುಸಕ್ಕರೆ ಸೇರಿಸಿ ಕೆಲವು ದಿನಗಳ ಕಾಲ ಬೆಳಿಗ್ಗೆ ಸೇವಿಸುತ್ತಾ ಬಂದರೆ ರಕ್ತ ಮೂಲವ್ಯಾಧಿಗೆ ಸಾಕಷ್ಟು ಅನುಕೂಲವಾಗುತ್ತದೆ.

ಹೆಸರುಕಾಳನ್ನು ನೆನೆಸಿ ಇದಕ್ಕೆ 5– 6 ಬೇವಿನ ಎಲೆಯನ್ನು ಹಾಕಿ ರುಬ್ಬಿಕೊಂಡು ಇದಕ್ಕೆ ಚಿಟಿಕೆ ಉಪ್ಪು ಹಾಕಿ ಕಲಸಿ ತುಪ್ಪದಲ್ಲಿ ಪಕೋಡಾ ರೀತಿ ಕರಿದು 21 ದಿನಗಳ ಕಾಲ ತಿನ್ನುತ್ತಾ ಬಂದರೆ ಹಾಗೂ ಆಹಾರದಲ್ಲಿ ಸ್ವಲ್ಪ ಪತ್ಯ ಇದ್ದರೆ ಶೀಘ್ರವಾಗಿ ಮೂಲವ್ಯಾಧಿ ಗುಣವಾಗುವುದು.

ಹಸಿಈರುಳ್ಳಿಯನ್ನು ತುರಿದು ತಕ್ಷಣ ಮೊಸರಿಗೆ ಹಾಕಿ ಚಿಟಿಕೆ ಉಪ್ಪು ಹಾಕಿ ಹಾಗೇ ಪ್ರತಿನಿತ್ಯ ಬೆಳಿಗ್ಗೆ ಸೇವಿಸುತ್ತಾ ಬಂದರೆ ಮೂಲವ್ಯಾಧಿಯ ನೋವು, ಹಿಂಸೆ ಎಲ್ಲವೂ ಕಡಿಮೆ ಆಗುತ್ತದೆ.

ಮನದ ಹದ ದೈವೇಚ್ಛೆ

ಮುದ್ದುರಾಮನ ಅರಿವು

ಭಾಗ–10



ಡಾ. ಪ್ರದೀಪಕುಮಾರ ಹೆಬ್ರಿ
98440 18457

ಮಾವಿನಲಿ ಸವಿರುಚಿಯ ಬಚ್ಚಿಟ್ಟವರು ಯಾರೋ?
ತೆಂಗಿನಲಿ ಎಳೆನೀರ ತುಂಬಿದವರಾರೋ?
ಮಲ್ಲಿಗೆಯ ಹೂವಿನಲಿ ಕಂಪನಿಟ್ಟವರಾರೊ?
ಸೋಜಿಗದ ಗುರು ಯಾರೊ– ಮುದ್ದುರಾಮ

ನಮ್ಮೆದುರು ನೂರಾರು ವಸ್ತು– ವಿಷಯಗಳು ಕಂಗೊಳಿಸುತ್ತಿರುತ್ತವೆ. ನಾವದರಿಂದ ಆನಂದ ಅನುಭವಿಸುತ್ತೇವೆಯೇ ವಿನಃ ಇದೆಂತು ಸಾಧ್ಯವೆನುವ ಪ್ರಶ್ನೆ ಹುಟ್ಟುವುದಿಲ್ಲ. ಸತ್ಯದ ದರ್ಶನ ಆದಾಗಲೇ ಜನ್ಮ ಸಾರ್ಥಕ. ನಾವು ವ್ಯಾವಹಾರಿಕ ಲಾಭದಾಯಕ ದೃಷ್ಟಿಯ ಬಿಟ್ಟು ದೇವಸಮರ್ಪಿತ ಅಧ್ಯಾತ್ಮ ದೃಷ್ಟಿಯನ್ನು ಹಿಡಿದಾಗ ಮಾತ್ರ ಮಾವಿನ ಹಣ್ಣಿನ ಸವಿರುಚಿ, ತೆಂಗಿನಲ್ಲಿ ಎಳೆನೀರು, ಮಲ್ಲಿಗೆಯ ಹೂವಿನಲ್ಲಿ ಕಂಪು ಅರಿಯಲು ಸಾಧ್ಯ. ನಮಗಾಗ




ನಿಶ್ಚಿತವಾಗಿ ಮೂಡುವ ಪ್ರಶ್ನೆಯೇ ಲೋಕದಧಿಪತಿ ಯಾರೋ? ಎಂಬುದು ಮಾತ್ರ.


ಪರಮಾತ್ಮನ ದಿವ್ಯಶಕ್ತಿಯ ಹಿರಿಮೆ ಗರಿಮೆಗಳು ಸದಾ ಕಣ್ಣೆದುರು ಗೋಚರ. ಮೀನಿಗೆ ಈಜುವುದನ್ನು ಕಲಿಸಿ ಜಲವನ್ನು ಕರುಣಿಸಿದವ, ಹಕ್ಕಿಗೆ ರೆಕ್ಕೆ ಬಯಲ ಸಿರಿ ತೆರೆದವ, ತನುವಿಗೆ ಉಸಿರ ಎರೆದವ, ಕಂಠಕ್ಕೆ ಜೇನಹನಿ ತುಂಬಿದವ, ಲತೆಗಳಲ್ಲಿ ಹೂವ ಅರಳಿಸಿದವ, ಬೆರಳಲ್ಲಿ ಬರೆಸಿ ರಸಗವಿತೆ ಮೂಡಿಸಿದವ, ಮೊಗದಲ್ಲಿ ಅಂದ, ಲತೆಯಲ್ಲಿ ಹೂವ, ಹರಿವ ಅಲೆಗಳಲ್ಲಿ ಚೈತನ್ಯ, ಹೂವಿನಲ್ಲಿ ನರುಗಂಪ, ಗೆಜ್ಜೆಗೆ ಲಾಸ್ಯ, ರಾಗಕೆ ಸವಿದನಿ ತುಂಬುವ ದೇವ ನಿಶ್ಚಿತವಾಗಿ ಸರ್ವ ಜೀವಿಗಳ ಜೀವದುಸಿರು.

ಭಗವಂತನ ಆಟವನ್ನು ಅರಿತವರು ಯಾರಿಲ್ಲ. ನಾವು ನಮ್ಮ ಲೋಕಬದುಕ ಚರಿತ್ರೆಯನರಿತಂತೆ ತಿಳಿಯುವ ನಿಜಸತ್ಯವೆಂದರೆ, "ಪರನಾರಿಗೊಲಿದವನ ಗಾಣದಲಿ ಇಕ್ಕುವನೊ/ ಹುಸಿಯಾಡಿ ನಗುವವನ ಕಪಿಯಾಗಿಸುವ ಎಂಬುದು. ನಾವು ದೇವಭಾವದಿಂದ ಇರಬೇಕೇ ಹೊರತು ದಾನವಭಾವದಿಂದ ಇರಬಾರದು. ಭಗವಂತನ ಕರುಣೆಯಿದ್ದರೆ ಹಸಿದು ಬಂದ ಮಗುವಿಗೆ ಅದರಮ್ಮ ತಟ್ಟೆಯಲ್ಲಿ ಬಿಸಿಬಿಸಿ ಅನ್ನ–ತುಪ್ಪ ನೀಡಿದರೆ ಅದೇ ಭಗವಂತನ ಸಾಕ್ಷಾತ್ಕಾರವಾದಂತೆ. ಭಗವಂತನ ಆಶೀರ್ವಾದ ಎನುವ ಕೀಲಿ ಕೊಟ್ಟರೆ ಆಟ; ಇಲ್ಲದಿರೆ ನಿಶ್ಶಬ್ಧ ಅರಿತರೆ ಅರಿವಿಗೆ ಬರುವುದು ಬರಿ ನಿಮಿತ್ತನು ಮನುಜ ಎಂದು ಮಾತ್ರ. ಮರೆಯಬಾರದ ವಿಷಯವೇ," ದೇವರೆಂಬ ತಾಯಿ, ಜೀವರೆಂಬ ಮಕ್ಕಳು ಉಂಡು– ಉಟ್ಟು ಆನಂದದಿಂದಿರಲೆಂದು ಈ ಭವ್ಯಪ್ರಪಂಚದಲ್ಲಿ ಸಮಸ್ತ ಸಿರಿ– ಸಂಪದ ಹರವಿದ. ಮಾನವ ಅತಿಯಾಸೆಯ ಸುರೆ ಅದರಲ್ಲಿ ಬೆರೆಸಿ ವಿಷಮಯ ಆಗಿಸಿದ. ಈ ದುರಾಶೆ ಅಳಿದರೆ ಮಾತ್ರ ನಮ್ಮ ಭಾವ ಸದ್ಭಾವವಾಗುತ್ತದೆ. ಈ ಸದ್ಭಾವದಿಂದ ಮಾಡಿದ್ದೆಲ್ಲ ಸದ್ಭಕ್ತಿ. ಇದರಿಂದ ಜೀವನ್ಮುಕ್ತಿ. ಹಾಗಾಗಿ ತನುವಿಗುಸಿರನು ಎರೆವ ಪರಮಾತ್ಮನನ್ನು ಧ್ಯಾನಿಸಿದಂತೆ ಅರಿವಾಗುವುದು ತಿರೆಯ ಮೇಲಿನ ಪ್ರಾಣಿ ಈ ಮನುಜ ಎಂದು!

ಮಣ್ಣಿಗೆ ನೀರು ಸುರಿದು ಹಸಿ ಮಾಡಿ ಬೀಜ ಎರೆದಂತೆ ಅರಳುವ ಹೂ ಬಣ್ಣ ಭಿನ್ನ. ಆದರೆ ಸಸ್ಯಜಾತಿಗಳೆಲ್ಲವೂ ಚಿಗುರಿ ಮುದುರುವ ರೀತಿ ಒಂದೇ ಆಗಿದೆ. ಇದಕ್ಕೆ ಕಾರಣನಾಗಿರುವ ವನಮಾಲಿ ಯಾರೆನುವ ಪ್ರಶ್ನೆ ಎದುರಾಗುವಾಗ ಸಿಗುವ ಉತ್ತರವೇ ದೇವರೆಂಬುದು ಮಾತ್ರ. ವ್ಯಾವಹಾರಿಕ ಲಾಭದ ದೃಷ್ಟಿಕೋನ ಅಳಿದಾಗ ನಮ್ಮ ಮನಸ್ಸು –ಭಾವ– ಪ್ರೀತಿ ಪವಿತ್ರವಾಗುತ್ತದೆ. ಪರಿಶುದ್ಧವಾಗುತ್ತದೆ. ಬದುಕು ರಸಗವಿತೆ ಎನಿಸುತ್ತದೆ.



ಚಿನ್ನಕ್ಕೆ ಸಮವಾದದ್ದು ಬಾಂಧವ್ಯ





ಸ್ನೇಹಾ ಆನಂದ್

ಕೃತಕ ಆಭರಣವನ್ನು ತೆಗೆದುಕೊಂಡಾಗ ಒಂದು ವೇಳೆ ಅದು ಕಳೆದು ಹೋದರೂ ನಾವು ಜಾಸ್ತಿ ತಲೆ ಕೆಡಿಸಿಕೊಳ್ಳುವುದಿಲ್ಲ, ಹೋದರೆ ಹೋಗಲಿ ಬಿಡು ಚಿನ್ನದ್ದೇನಲ್ಲ ಎಂದು ಸುಲಭವಾಗಿ ಹೇಳುತ್ತೇವೆ ಅಲ್ಲವೇ!

ಆದರೆ ಅದೇ ಆಭರಣ ಚಿನ್ನದ್ದಾದರೆ!!? ತುಂಬಾ ಜೋಪಾನವಾಗಿ ಎತ್ತಿ ಇಡುತ್ತೇವೆ, ಅಕಸ್ಮಾತ್ ಕಳೆದು ಹೋದರೆ ಜೀವನಪೂರ್ತಿ ಅದನ್ನು ನೆನಪಿಸಿಕೊಂಡು ಕೊರಗುತ್ತೇವೆ, ಅಳುತ್ತೇವೆ!!!!

ಆದರೆ ಒಬ್ಬೊಬ್ಬರು ನಮ್ಮನ್ನು ಹೀಗೆಯೇ ಕೃತಕ ಆಭರಣದ ಸ್ಥಾನದಲ್ಲಿ ಇಟ್ಟಿರುತ್ತಾರೆ, ಅದು ನಮಗೆ ಗೊತ್ತಿರುವುದೇ ಇಲ್ಲ ಸಮಯ ಬಂದಾಗ ಅರಿವಿಗೆ ಬರುತ್ತದೆ!ಅವರು ನಮ್ಮ ಕೈಯನ್ನು ಸುಲಭವಾಗಿ ಬಿಟ್ಟರೆ ಆಗ ತಿಳಿಯುತ್ತದೆ ನಾನೆಷ್ಟು ಇವರನ್ನು ನಂಬಿ, ಪ್ರೀತಿಯಿಂದ ಕಾಣುತ್ತಿದ್ದೆ, ಆದರೆ ಅವರು ನಮ್ಮನ್ನು ಗಿಲೀಟು ಒಡವೆಯಂತೆ ಬಳಸಿಕೊಂಡರು ಎನ್ನುವ ನೋವು ಮನವನ್ನು ತೀರಾ ಹಿಂಡುತ್ತದೆ ಕೂಡ!



ಇದೇ ನೋಡಿ ಸಂಬಂಧಗಳಲ್ಲಿ ತೋರುವ ಭೇದಭಾವದ ಗುಣಗಳು ! ಈ ರೀತಿಯ ಭೇದ ಭಾವಗಳೇ ಹೃದಯಕ್ಕೆ ಮುಳ್ಳಿನಂತೆ ಚುಚ್ಚಿ ಗಾಯ,ನೋವು ಮಾಡುತ್ತವೆ!

ಸ್ನೇಹಿತರಲ್ಲಿಯೂ ಕೂಡ ಇದು ಅಪರೂಪವಲ್ಲ, ಅಲ್ಲಿಯೂ ನಮ್ಮ ಮನಸ್ಸಿಗೆ ಹತ್ತಿರವಾಗಿರುವ ಆತ್ಮೀಯರು ಹಾಗೆ ಮಾಡಿದಾಗ ಮಾತನಾಡದೆ ಮೌನವಾಗಿ ಅವರಿಂದ ದೂರ ಸರಿದು ಬಿಡುತ್ತೇವೆ ಅಷ್ಟೇ!

ಆದರೆ ರಕ್ತ ಸಂಬಂಧಗಳಲ್ಲಿ, ಬಾಂಧವ್ಯದಲ್ಲಿ ಹಾಗಲ್ಲ, ಅವರು ಗಿಲೀಟು ಆಭರಣದಂತೆ ನಮ್ಮನ್ನು ಬಳಸಿದರೂ ಕೂಡ ಅವರನ್ನು ಬಿಡಲು ಸಾಧ್ಯವಿಲ್ಲ! ಏಕೆಂದರೆ ಬಾಂಧವ್ಯದಲ್ಲಿ ನಾವು ಮತ್ತೆಮತ್ತೇ ಭೇಟಿಯಾಗುವ ಸಂದರ್ಭ ಎದುರಾಗುತ್ತದೆ, ಹೀಗಾಗಿ ನಮ್ಮಿಂದ ನಮ್ಮವರಿಗೆ ನೋವಾಗುತ್ತದೆ ಎನ್ನುವ ಅರಿವು ಅನಿವಾರ್ಯತೆಯು ಸಂಬಂಧಗಳಿಗೆ ಸರಿಯಾದ ಬೆಲೆ ಕೊಟ್ಟು, ಅವರ ಭೇದಭಾವಗಳ ಗುಣ ಕಂಡರೂ ಮುಖದಲ್ಲಿ ನಗು ಇಟ್ಟು ಜೀವನಪರ್ಯಂತ ನಿಭಾಯಿಸುವುದು ನಮ್ಮ ಅನಿವಾರ್ಯವೂ ಕೂಡ!

ಸಂಬಂಧಗಳನ್ನು ಹರಿದುಕೊಂಡರೆ ನಮ್ಮ ಸುತ್ತುವರಿದ ಜನರಿಗೆ ಪರಿಣಾಮ ಬೀರುತ್ತದೆ ಎನ್ನುವ ಆತಂಕ! ಹೀಗಾಗಿ ಮನಸ್ಸಿಗೆ ನೋವಾದರೂ ಸಮಾಧಾನದಿಂದ ವ್ಯವಹರಿಸವುದೇ ಮುಖ್ಯ. ಕಾರಣ ಅವರು ನಮಗೆ ಕೃತಕ ಆಭರಣವಲ್ಲ!

ಸಂಬಂಧಗಳಿಗೆ ಬೆಲೆ ಕೊಟ್ಟು ಅರ್ಥ ಮಾಡಿಸಲು ಪ್ರಯತ್ನಿಸಿದರೂ ಕೂಡ, ಅವರು ಮಾತ್ರ ಈ ಸಂಬಂಧ ಇಷ್ಟೇ ಎಂದು ತೂಕ ಹಾಕಿ ಬಿಟ್ಟಿರುತ್ತಾರೆ ಅಷ್ಟೇ!

ಆದರೆ ರಕ್ತ ಸಂಬಂಧ, ಜೀವನದಲ್ಲಿ ಸಿಕ್ಕ ಬಾಂಧವ್ಯಗಳು ಕೃತಕ ಆಭರಣವಲ್ಲ, ಚಿನ್ನದಂತೆ ಬೆಲೆ ಬಾಳುವದು ಎನ್ನುವುದು ಸದಾ ನಮ್ಮ ನೆನಪಿನಲ್ಲಿದ್ದರೆ ಇನ್ನೊಬ್ಬರ ನೋವಿಗೆ ನಾವು ಕಾರಣವಾಗುವುದಿಲ್ಲ !



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,